ಈ ಧಿವಸ ನಮ್ಮಲ್ಲಿರತಕ್ಕ ಬೇಸಿಕ್ ಸ್ಕೂಲುಗಳು ಸಾಲವು. ರೈತನ ಮಕ್ಕಳು ವಿದ್ಯಾವಂತರಾಗಬೇಕಾಗಿದ್ದರೆ ಸರ್ಕಾರದವರು ಹೆಚ್ಚು ಹೆಚ್ಚು ಬೇಸಿಕ್ ಸ್ಕೂಲುಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ತೆರೆಯಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ನಾನು ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಶಿವಪ್ಪ (ಚಿತ್ರದುರ್ಗ).—ಸ್ವಾಮಿ, ನಾನೀಗ ಸಭೆಯ ಮುಂದಿರತಕ್ಕ ಎಜುಕೇಷನ್ ಡಿಮ್ಯಾಂಡನ್ನು ಸಮರ್ಥಿಸುತ್ತ ಕೆಲವು ವಿಷಯಗಳನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ.

ಮೊದಲನೆಯದಾಗಿ ಅತಿ ಮುಖ್ಯವಾದ ವಿಚಾರವೆಂದರೆ ಸರ್ಕಾರದವರು ಇತ್ತೀಚೆಗೆ ನೇಮಕ ಮಾಡಲಾಗಿದ್ದ ಡಾ॥ ಆರ್. ನಾಗನಗೌಡ ಸಮಿತಿಯವರು ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದ್ದಾರೆಯಷ್ಟೇ? ಈ ಸಮಿತಿಯನ್ನು ಏತಕ್ಕೆ ನೇಮಕ ಮಾಡಿದರು?

ಉಪಾಧ್ಯಕ್ಷರು.—ಸಮಿತಿ ಏಕೆ ನೇಮಿಸಿದರು ಎಂಬಂಶಕ್ಕೆ ಏಕೆ ಹೋಗುತ್ತೀರಿ? ಸಮಿತಿಯ ರಿಪೋರ್ಟಿಗೆ ಅನ್ವಯವಾಗುವ ಹಾಗೆ ಮಾತನಾಡಬೇಕು.

ಶ್ರೀ ಜಿ. ಶಿವಪ್ಪ.—ಅನ್ವಯವಾಗ ತಕ್ಕಂಥ ರೀತಿಯಲ್ಲಿ ಮಾತನಾಡುತ್ತೇನೆ. ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ ಯಾವ ಸೆಕ್ಷನ್ ಆಫ್ ಪೀಪಲ್ ಬ್ಯಾಕ್‌ವರ್ಡ್ ಎಂದು ತಿಳಿಸಿ ಎಂದು ಕಮಿಟಿಗೆ ಹೇಳಿದ್ದಾರೆಯೇ ಹೊರತು, ಯಾವ ಯಾವ ಕಮ್ಯೂನಿಟಿ ಹೇಳಿ ಎಂದು ತಿಳಿಸಿಲ್ಲ. Terms of referenceನ್ನು ಸರ್ಕಾರದವರು ಕ್ಲಿಯರಾಗಿ ಹೇಳಿದ್ದಾರೆ. ಡಾಕ್ಟರ್ ನಾಗನಗೌಡ ಕಮಿಟಿಯವರು ಯಾವ ಯಾವ ಕಮ್ಯೂನಿಟಿಗಳು ಬ್ಯಾಕ್‌ವರ್ಡ್ ಎಂದು ಹೇಳಿ ವಿಪರೀತ ಗೊಂದಲಕ್ಕೆ ಅವಕಾಶಮಾಡಿದ್ದಾರೆ. ಈ ಸಭೆಯ ಗಮನಕ್ಕೆ ಈ ರಿಪೋರ್ಟಿನ ವಿಚಾರದಲ್ಲಿ ಶ್ರೀ ಮಲ್ಲಾರಾಧ್ಯರೂ ಶ್ರೀ ಘೋರ್ಪಡೆಯವರೂ ಕೆಲವು ಅಂಶಗಳನ್ನು ಹೊರಪಡಿಸಿದ್ದಾರೆ. ಈ ಕಮಿಟಿಯವರು ಯಾವ ಬೇಸಿಸ್ ಮೇಲೆ ಹೊರಟಿದ್ದಾರೋ, ಅದು ತಪ್ಪು ಬೇಸಿಸ್ ಅಂಥ ತಪ್ಪು ಆಧಾರದ ಮೇಲೆ ಇನ್‌ಫರೆನ್ಸ್ ಡ್ರಾ ಮಾಡಿದ್ದಾರೆಂದು ಒತ್ತಿಯೊತ್ತಿ ಹೇಳಬೇಕಾಗಿದೆ.

ಶ್ರೀ ಟಿ. ಎಲ್. ಮೂಡಲಗಿರಿಗೌಡ (ಕುಣಿಗಲ್).—ಈ ಬ್ಯಾಕ್‌ವರ್ಡ್ ಕ್ಲಾಸಸ್ ಕಮಿಟಿಯ ರಿಪೋರ್ಟ್ ಮೇಲೆ ಮಾಡಿರುವುದು ಇಂಟೆರಿಂ ಆರ್ಡರ್. ಕೆಲವು ವಿಟ್‌ನೆಸಸ್ಸನ್ನೂ, ಪರ್ಸೊನ್ಯಾಲಿಟಿಗಳನ್ನೂ ಇನ್‌ವೈಟ್‌ಮಾಡಿ, ಅವರ ಅಭಿಪ್ರಾಯವನ್ನು ಕೇಳಿ ತಿಳಿದುಕೊಂಡು ಈ ರಿಪೋರ್ಟಿಗೆ ಫೈನಲ್ ಟಚ್ ಕೊಡುವ ಸಂದರ್ಭದಲ್ಲಿ, ಈ ರಿಪೋರ್ಟಿನ ಮೇಲೆ ವಿಶೇಷವಾದಂಥ ಟೈಮನ್ನು ಸ್ಪೆಂಡ್‌ಮಾಡುವುದು ಸರಿಯೆ?

ಶ್ರೀ ಜಿ. ಶಿವಪ್ಪ.—ನಾನು ಹೇಳುವುದನ್ನು ಕೇಳದೆ ಇಂಟರ್‌ಫಿಯರ್‌ಮಾಡಿದರೆ ಏನು ಮಾಡುವುದು?

ಶ್ರೀ ಟಿ. ಎಲ್. ಮೂಡಲಗಿರಿಗೌಡ.—ಈ ರಿಪೋರ್ಟಿನ ಮೇಲೆ ಫೈನಲ್ ಆಗಿ ಡಿಸೈಡ್‌ಮಾಡುವ ದೊಡ್ಡ ಅವಕಾಶ ಇನ್ನೂ ಇರುವಾಗ, ಇವೊತ್ತಿನ ದಿವಸ ಈ ಇಂಟಿರಿಂ ಆರ್ಡರ್ ಮೇಲೆ ಏತಕ್ಕೆ ಇಷ್ಟು ಡಿಸ್‌ಕಸ್ ಮಾಡಬೇಕು?

ಶ್ರೀ ಜಿ. ಶಿವಪ್ಪ.—ಈ ರಿಪೋರ್ಟು ಮುಂದೆ ಸ್ಕೂಲು ಕಾಲೇಜುಗಳಿಗೆ ಸೀಟುಕೊಡುವಾಗ ಅನ್ವಯವಾಗ ತಕ್ಕಂಥ ರಿಪೋರ್ಟ್ ಆಗಿದೆ. ಇದರಿಂದ ವಿದ್ಯಾಭ್ಯಾಸ ಪರಿಸ್ಥಿತಿ ಗೊಂದಲಕ್ಕಿಟ್ಟುಕೊಳ್ಳಬಹುದು ಮುಂದೆ ಫೈನಲ್ ರಿಪೋರ್ಟ್ ಮಾಡುವ ಸಂದರ್ಭದಲ್ಲಿ ಈಗ ಗಣನೆಗೆ ತೆಗೆದುಕೊಂಡಿರುವ ವಾಸ್ತವ ಅಂಶಗಳನ್ನು ಸಂಪೂರ್ಣವಾಗಿ ಮಾರ್ಪಾಡು ಮಾಡಬೇಕು. ಈಗ ಕಮಿಟಿಯವರು ಎರಡು ಅಂಶಗಳನ್ನು ಇಟ್ಟುಕೊಂಡಿದ್ದರು. 1. ಬ್ಯಾಕ್‌ವರ್ಡ್‌ನೆಸ್ ಡಿಟರ್‌ಮಿನ್ ಮಾಡುವ ಸಂದರ್ಭದಲ್ಲಿ ಲಿಟರೆಸಿ ಅಂಶವನ್ನು ತೆಗೆದು

(ಶ್ರೀ ಜಿ. ಶಿವಪ್ಪ)

ಕೊಂಡಿದ್ದಾರೆ. (2) Representation in Government Services ತೆಗೆದುಕೊಂಡಿದ್ದಾರೆ. ಈ ಎರಡು ಅಂಶಗಳೂ ಕಾರಣಬದ್ಧವಾಗಿಯೂ ಇಲ್ಲ, ಆಧಾರಪೂರ್ವಕವಾಗಿಯೂ ಇಲ್ಲ. ಹಳೆಯಮೈಸೂರು ಸ್ಟೇಟಿನಲ್ಲಿ 1951ನೆಯ ಇಸವಿ ಸೆನ್ಸಸ್ ಆಧಾರದ ಮೇಲೆ ಕಮ್ಯೂನಿಟಿಗಳನ್ನು ತೆಗೆದುಕೊಂಡಿದೆ ಎಂದು ಹಿಂದೆ ಮಾತನಾಡಿರತಕ್ಕಂಥವರು ಹೇಳಿದರೂ ಪುನಃ ಇತರ ಏರಿಯಾಗಳಲ್ಲಿ ಪೂರ್ತಿ ಜಾತಿಗಳ ಆಧಾರದ ಮೇಲೆ ಸೆನ್ಸಸ್ ಆಗಿರುವ ಅಂಶ ಇಲ್ಲ ಹೇಳಿಯೂ ಇಲ್ಲ ತಲೆಗೆಲ್ಲಾ ಒಂದೇ ಮಂತ್ರ ಅಪ್ಲೈ ಮಾಡಿದರೆ ತಪ್ಪಾಗುತ್ತದೆ. 1940ನೆಯ ಇಸವಿಯಿಂದ 1960ನೆಯ ಇಸವಿಯವರೆಗೆ, ಈ 20 ವರ್ಷಗಳಲ್ಲಿ, ಆವಾಗ ಬ್ಯಾಕ್‌ವರ್ಡ್ ಆಗಿದ್ದಂಥ ಜಾತಿಗಳು ಇನ್ನೊತ್ತು ಮೇಲ್ಮಟ್ಟಕ್ಕೆ ಬಂದಿರಬಹುದು. I may submit that the whole Report is based on guess work.

Sri C. M. ARUMUGHAM.—I rise to a point of order. Are we discussing anything on the report or are we discussing the Education Demand?

Mr. DEPUTY SPEAKER.—A ruling has already been given. But, I suppose you were not present in the House at that time.

Sri C. M. ARUMUGHAM.—You can kindly revise the ruling. Every half-an-hour we are adopting extraordinary procedure. Every time a ruling is given and it is changed.

Mr. DEPUTY SPEAKER.—He is speaking in relation to the Education Demand.

Sri C. M. ARUMUGHAM.—On any Demand he can bring this Report for discussion. It is quite possible that on even Medical Demand he can discuss this Report with the result that so many times this Report comes up for discussion. I would therefore, request the Chair to please revise its ruling.

ಉಪಾಧ್ಯಕ್ಷರು.—ರಿಪೋರ್ಟನ್ನು ಪೂರ್ತಿ ಓದಿ ಮಾತನಾಡಿ.

ಶ್ರೀ ಜಿ. ಶಿವಪ್ಪ.—ಓದಿ ಮಾತನಾಡಿದರೂ ಒಂದೇ, ಜ್ಞಾಪಕಮಾಡಿಕೊಂಡು ಮಾತನಾಡಿದರೂ ಒಂದೇ.

ಉಪಾಧ್ಯಕ್ಷರು.—ಮಾತನಾಡುವುದಕ್ಕೆ ಇನ್ನು ಹೆಚ್ಚು ವೇಳೆ ಇಲ್ಲ.

ಶ್ರೀ ಎಂ. ಸಿ. ನರಸಿಂಹನ್.—ಅವರಿಗೆ ಸ್ವಲ್ಪ ವೇಳೆ ಕೊಡಬೇಕು.

ಶ್ರೀ ಜಿ. ವೆಂಕಟೇಗೌಡ.—ಈ ರಿಪೋರ್ಟನ್ನು ಜಾರಿಗೆ ತಂದಿರತಕ್ಕಂಥ ಸರ್ಕಾರವನ್ನು ಟೀಕೆಮಾಡುವುದು ಬಿಟ್ಟು, ಈ ರಿಪೋರ್ಟನ್ನು ಓದಿದರೆ ಏನು ಸುಖ?

Sri M. C. NARASIMHAN.—It is not like that. Pay and Establishment come under Education also. I do not think we are prevented from discussing this very important question of policy.

Sri G. SIVAPPA.—Even in regard to the 'representation in Government Service', the basis on which this Report is prepared is totally wrong.

ಇಷ್ಟು ಹೇಳಿದ ಮೇಲೆ ಈ ರಿಪೋರ್ಟನ್ನು ಯಾವ ದೃಷ್ಟಿಯಿಂದ ನೋಡಿದರೂ ಕೂಡ ಒಪ್ಪತಕ್ಕಂಥದ್ದಲ್ಲ. ಮುಂದೆ ವಿದ್ಯಾಭ್ಯಾಸಕ್ಕಾಗಿ ಸ್ಕೂಲು ಕಾಲೇಜುಗಳಿಗೆ ಸೇರತಕ್ಕಂಥ ವಿದ್ಯಾರ್ಥಿಗಳಿಗೆ ಬಹಳ ತೊಂದರೆ ಉಂಟು ಮಾಡತಕ್ಕಂಥ ರಿಪೋರ್ಟು ಇದು. ವಿದ್ಯಾಮಂತ್ರಿಗಳಿಗೆ ಈ ವಿಚಾರವನ್ನು ಅತ್ಯವಶ್ಯಕವಾಗಿ ಒತ್ತಿ ಹೇಳಬೇಕಾಗಿದೆ. ಎರಡನೆಯ ಟರ್ಮ್ಸ್ ಆಫ್ ರೆಫರೆನ್ಸಿನಲ್ಲಿ "in respect of admissions to technical institutions" ಎಂದು ಇದೆ. ಅದಕ್ಕೋಸ್ಕರ ಈ ರಿಪೋರ್ಟಿನ ಆಧಾರದ ಮೇಲೆ ಅಡ್‌ಮಿಷನ್ಸ್ ಮಾಡುವುದಕ್ಕೆ ಸಂಪೂರ್ಣ ಅವಕಾಶ ಉಂಟೆಂದು ತಿಳಿದುಕೊಂಡಿದ್ದೇನೆ. ಆದುದರಿಂದ, ಆಖೈರಾಗಿ ರಿಪೋರ್ಟು ಡ್ರಾಫ್ಟು ಮಾಡಬೇಕಾದರೆ ಫೈನಲ್ ಗವರ್ನ್‌ಮೆಂಟ್ ಆರ್ಡರ್ ಆಗುವ ಸಂದರ್ಭದಲ್ಲಿ, ಸರ್ಕಾರದವರು ಈ ಸಭೆಯ ಅಭಿಪ್ರಾಯವನ್ನು ಪುನಃ ತೆಗೆದುಕೊಂಡು, ಆರ್ಥಿಕಸ್ಥಿತಿಯ ಆಧಾರದ ಮೇಲೆ ಬ್ಯಾಕ್‌ವರ್ಡ್‌ನೆಸ್ ಡಿಟರ್‌ಮಿನ್ ಮಾಡುವುದು ಒಳ್ಳೆಯದು. ಇಂಡಿಯನ್ ಕಾನ್ಸ್ಟಿಟ್ಯೂಷನ್ನಿನಲ್ಲಿ ಕ್ಯಾಸ್ಟ್, ಕ್ರೀಡ್ ತೆಗೆಯಬೇಕೆಂದು ಹೇಳತಕ್ಕಂಥ ಸಂದರ್ಭದಲ್ಲಿ, ಒಂದು ಆರ್ಥಿಕ ಸ್ಥಿತಿಯನ್ನು ಆಧಾರವಾಗಿಟ್ಟುಕೊಂಡು ಮಾಡುವುದು ಒಳ್ಳೆಯದು. ಇಷ್ಟು ಹಣಕ್ಕಿಂತ ಕಡಮೆ ಆದಾಯವಿರತಕ್ಕಂಥವರು ಬ್ಯಾಕ್‌ವರ್ಡ್, ಇಷ್ಟಿಷ್ಟು ರೂಪಾಯಿ ಕಂದಾಯ ಕೊಡತಕ್ಕಂಥವರ ಮಕ್ಕಳು ಬ್ಯಾಕ್‌ವರ್ಡ್ ಎಂದು ನಿರೂಪಣೆ ಮಾಡುವುದಕ್ಕೆ ಅವಕಾಶ ಉಂಟು. ಒಳ್ಳೆಯ ಸಲಹೆಗಳನ್ನು ಕೊಡುವವರಿದ್ದಾರೆ. ಅಂಥವರ ಸಲಹೆಗಳನ್ನು ತೆಗೆದುಕೊಂಡು, ಸಂಪೂರ್ಣವಾಗಿ ಮಾನ್ಯ ಮಾಡಲಿ,

In respect of admissions to technical institutions and appointments in Government Service, it is the economic condition that should determine the state of backwardness of a man. The Congress Government's policy is to establish a socialistic pattern of society.

Mr. DEPUTY SPEAKER.—The Hon'ble Member is aware that the time limit of 10 minutes is over. Please conclude. ವೇಳೆ ಆಯಿತು ಮುಗಿಸಿ.

ಶ್ರೀ ಜಿ. ಶಿವಪ್ಪ.—ನಾನು ಏನೂ ಮಾತನಾಡಿಯೇ ಇಲ್ಲ. ವೇಳೆಆಯಿತು ಎಂದರೆ ಹೇಗೆ?

ಉಪಾಧ್ಯಕ್ಷರು.—ಹತ್ತು ನಿಮಿಷ ಕಾಲಾವಧಿ ಇದೆ.

ಶ್ರೀ ಜಿ. ಶಿವಪ್ಪ.—ಐದು ನಿಮಿಷ ತಾವು ತೆಗೆದುಕೊಂಡುಬಿಟ್ಟಿರಿ, ಇನ್ನು ಐದು ನಿಮಿಷ ಇವರು (ಅಪೊಸಿಷನ್ ಮೆಂಬರುಗಳು) ಇಂಟರಪ್ಟ್ ಮಾಡಿ ತೆಗೆದುಕೊಂಡುಬಿಟ್ಟರು. ಇನ್ನು ನಾನು ಏನು ಮಾತನಾಡುವುದು?

4 P.M.

ಇನ್ನೊಂದು ವಿಚಾರವನ್ನು ತಿಳಿಸಬೇಕಾಗಿದೆ. ಪ್ರೈಮರಿ ವಿದ್ಯಾಭ್ಯಾಸ ಅತಿಮುಖ್ಯವಾದುದು. ಇದಕ್ಕೆ ಸರ್ಕಾರ ಹೆಚ್ಚಿನ ಗಮನಕೊಡುವುದು ಅತ್ಯಾವಶ್ಯಕ. ಹಳೆಯ ಮೈಸೂರಿನಲ್ಲಿ ಇದಕ್ಕೆ ಯಥೇಚ್ಛವಾಗಿ ಹಣವನ್ನು ಖರ್ಚು ಮಾಡುತ್ತಿದ್ದರು. ಈಗ ವಿದ್ಯಾಭ್ಯಾಸಕ್ಕೆ ಖರ್ಚುಮಾಡುವ ಒಟ್ಟು ಹಣವನ್ನು ನೋಡಿದರೆ, ಹೋದಸಾರಿ ಹತ್ತು ಕೋಟಿ ಇದ್ದುದನ್ನು ಈ ವರ್ಷ ಹದಿಮೂರು ಕೋಟಿಗೆ ಹೆಚ್ಚಿಸಿದ್ದಾರೆ. ಇನ್ನೂ ಹೆಚ್ಚು ಖರ್ಚುಮಾಡುವುದು ಅವಶ್ಯಕ, ಟ್ರೈನಿಂಗ್ ಸಂಸ್ಥೆಗಳನ್ನು ಹೆಚ್ಚು ಮಾಡಿ, ಹೆಚ್ಚು ಸಂಖ್ಯೆಯಲ್ಲಿ ಶಿಕ್ಷಣ ಪಡೆದ ಉಪಾಧ್ಯಾಯರನ್ನು ನೇಮಕ ಮಾಡುವುದು ಒಳ್ಳೆಯದು. ಈಗ trained teachers ಕೆಲಸವಿಲ್ಲದೆ ಪಬ್ಲಿಕ್ ಸರ್ವಿಸ್ ಕಮಿಷನ್‌ನಿಂದ ಕೆಲಸಕ್ಕಾಗಿ ಕಾದಿದ್ದಾರೆ. ಅವರಿಗೆಲ್ಲ ಕೆಲಸಕೊಡಬೇಕು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಒತ್ತಾಯ ಪ್ರಾಥಮಿಕ ಶಿಕ್ಷಣವನ್ನು ಜಾರಿಗೆ ತರಬೇಕೆಂಬ ಉದ್ದೇಶವಿರುವುದರಿಂದ, ಈ ಯೋಜನೆಯ ಕೊನೆಯಲ್ಲಿ ತರುತ್ತೇವೆಂದು ಈಗ ಸುಮ್ಮನೆ ಕುಳಿತುಕೊಳ್ಳುವುದು ಸರಿಯಲ್ಲ. ಈಗಿನಿಂದಲೇ ಪ್ರತಿಯೊಂದು ಹಳ್ಳಿಯಲ್ಲಿಯೂ ಸ್ಕೂಲಾಗಬೇಕಾದರೆ, ಎಷ್ಟು ಸ್ಕೂಲುಗಳನ್ನು ತೆರೆಯಬೇಕು, ಎಷ್ಟು ಅಧ್ಯಾಪಕರನ್ನು ನೇಮಕ ಮಾಡಬೇಕು, ಇತ್ಯಾದಿ ವಿಷಯಗಳನ್ನೆಲ್ಲಾ ಯೋಚನೆಮಾಡಬೇಕು.

Sri C. M. ARUMUGHAM.—That point is only in the draft plan. We are not sure whether it would be accomplihsed or not.

Sri G. SIVAPPA.—Apart from the plan, according to the constitution they want to introduce compulsory primary education by the end of 1960.

ಆದುದರಿಂದ ಮೂರನೆಯ ಪಂಚವಾರ್ಷಿಕ ಯೋಜನೆಯೊಳಗೆ ಈ ಕಾರ್ಯವನ್ನು ಮಾಡುವುದಕ್ಕೆ ತಕ್ಕ ಸಿದ್ಧತೆಯನ್ನು ಈಗಿನಿಂದಲೇ ಮಾಡುವುದು ಅತ್ಯಾವಶ್ಯಕ ಹೀಗೆ ಮಾಡದಿದ್ದರೆ ಮುಂದೆ ಒದ್ದಾಡಬೇಕಾಗುತ್ತದೆ.

ವಿದ್ಯಾಭ್ಯಾಸದ ಬೇಡಿಕೆ ಬಹುಮುಖ್ಯವಾದುದು. ಸಾಮಾಜಿಕ ಅಭಿವೃದ್ಧಿಯ ಕಾರ್ಯಗಳಲ್ಲಿ ವಿದ್ಯಾಭ್ಯಾಸ ಬಹು ಮುಖ್ಯ. ಈ ಬಾಬಗೆ ಒದಗಿಸುವ ಹಣ ಲ್ಯಾಪ್ಸ್ ಆಗದೇ ಇರುವ ಹಾಗೆ ಸರ್ಕಾರ ಮತ್ತು ವಿದ್ಯಾಭ್ಯಾಸದ ಇಲಾಖೆ ನೋಡಿಕೊಳ್ಳಬೇಕು. Construction of primary school buildings in rural parts is very important. ನಗರಗಳಲ್ಲಿ ಮತ್ತು ದೊಡ್ಡ ಪಟ್ಟಣಗಳಲ್ಲಿ ಪ್ರೈಮರಿ ಸ್ಕೂಲು ಕಟ್ಟಡ ಕಟ್ಟಬೇಕೆಂದರೆ ಅಲ್ಲಿನ ಜನರಿಂದ ಕಾಂಟ್ರಿಬ್ಯೂಷನ್ ಕೇಳುವುದಿಲ್ಲ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕಟ್ಟಬೇಕಾದರೆ ಅಲ್ಲಿನ ಜನರಿಂದ ಶೇಕಡ 40 ರಷ್ಟು ಕಾಂಟ್ರಿಬ್ಯೂಷನ್ ಕೇಳುತ್ತಾರೆ. ಹಿಂದೆ ಶೇಕಡ 50 ರಷ್ಟು ಕೇಳುತ್ತಿದ್ದರು. Without asking for any contribution from the city people they go on constructing buildings in cities and towns, but in villages they insist on 40 per cent contribution from the people. Why is this discrimination? If contribution is insisted upon, it must be insisted upon in the case of all people, both in the cities and in the villages. They cannot discriminate between city people and village people. Simply because the people in cities are vocal and create trouble for Government and they voice their grievances in the Press, the Government sanction schools in cities, I do not say that schools should not be sanctioned in cities, but at the same time they must adopt the same policy towards villages also. Otherwise they must force the city people also to make 40 per cent contribution as in villages.

Then, Sir, the Government have brought about uniformity in so many rules and regulations. Our Finance Minister Sri Mariappa has been good enough to bring uniform taxation measures, but so far as our educational institutions are concerned, we have got different curricula in the different areas. If a teacher is transferred from one region to another, he does not like to go there because the standard and the curriculum in that area are different. If there is uniformity in education curriculum, nobody would have any grievance to go to any area. I want to know why Government have not brought about uniformity in the educational field also. This is very necessary.

Sir, my friend Sri Maqsood Ali Khan was complaining that Bidar was neglected. I want the Government to do something for Bidar. In the same way I want to say that Chitaldrug is also neglected. I do not say that Chitaldrug has not been given anything. We have been insisting on sanctioning a polytechnic for some time, but the Government are hesitating to sanction the same. One reason given is that we have one at Davangere. But I want to say that the one at Davangere was sanctioned and given to us long ago before integration. So we have requested Government to give us a polytechnic for Chitaldrug.

Then, Sir, our Education Minister Sri Anna Rao Ganamukhi is a man of fine arts and culture. I request that he must see that in every district

(SRI G. SIVAPPA)

headquarters an open air theatre or closed theatre is established to give encouragement to art and culture. This request is being made since a long time. The previous Ministries were assuring that they would sanction, but nothing was done. Previously we had only 9 districts, but now we have 19 districts. Even if they decide to give some, I do not know on what basis and on what priority they would be given. I request Government to start at least two or three such theatres every year so that in the course of a few years all the districts could be given these theatres. This is very essential. I am not making this demand because I am a player or an artist, but I have got some knack of appreciating art and culture.

With these words, I close.

ಶ್ರೀ ಜಿ. ವೆಂಕಟೇಗೌಡ.—ಸ್ವಾಮಿ, ವಿದ್ಯಾಭ್ಯಾಸದ ಬೇಡಿಕೆಯನ್ನನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಪ್ರಾಥಮಿಕ ವಿದ್ಯಾಭ್ಯಾಸವನ್ನು ತಾಲ್ಲೂಕ್ ಬೋರ್ಡ್‌ಗಳಿಗೆ ವಹಿಸಬೇಕೆಂದು ನಿರ್ಧಾರ ಮಾಡಿರುವುದಾಗಿ ಮುಖ್ಯಮಂತ್ರಿಗಳು ಹೇಳಿದಹಾಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ನಿಜವಾಗಿಯೂ ಸರ್ಕಾರ ಈರೀತಿ ತೀರ್ಮಾನ ಮಾಡಿದ್ದರೆ ಇದರಷ್ಟು ಬೇಜವಾಬ್ದಾರಿ ತೀರ್ಮಾನ ಬೇರೊಂದಿಲ್ಲವೆಂದು ಹೇಳಬೇಕಾಗಿದೆ. ಏಕೆಂದರೆ, ಪ್ರಾಥಮಿಕ ಶಿಕ್ಷಣದ ಹೊಣೆ ಸರ್ಕಾರದ ಮೇಲೆ ಬಿದ್ದಿರುವುದು ; ಸರ್ಕಾರದ ಜವಾಬ್ದಾರಿ. ಇದುವರೆಗೆ ರಾಜ್ಯಾಂಗದಲ್ಲಿರುವುದು ಹತ್ತು ವರ್ಷಗಳಲ್ಲಿ ಆದಷ್ಟು ಮಟ್ಟಿಗೂ ಒತ್ತಾಯ ಪ್ರಾಥಮಿಕ ಶಿಕ್ಷಣವನ್ನು ದೇಶದಾದ್ಯಂತ ಜಾರಿಗೆ ತರಬೇಕೆಂದು. ಇದನ್ನು ಇನ್ನೂ ಸಾಧನೆ ಮಾಡದೇಇರುವಾಗ, ಪ್ರಾಥಮಿಕ ಶಿಕ್ಷಣದ ಜವಾಬ್ದಾರಿಯನ್ನು ತಾಲ್ಲೂಕ್ ಬೋರ್ಡಿಗೆ ಒಳಪಡಿಸಿದರೆ ರಾಜ್ಯಾಂಗದಲ್ಲಿ ಹೇಳಿರುವುದನ್ನು ಸಾಧಿಸಲು ಸಾಧ್ಯವೆ ಎನ್ನುವುದನ್ನು ಸರ್ಕಾರ ಯೋಚನೆಮಾಡಬೇಕಾದುದು ಅತ್ಯಾವಶ್ಯಕ. ಅಲ್ಲದೆ, ಮೂರನೆಯ ಪಂಚವಾರ್ಷಿಕ ಯೋಜನೆಯ ಮೂಲಕ ಆರರಿಂದ ಹತ್ತು ವರ್ಷದೊಳಗಿನ ಎಲ್ಲಾ ಜನರಿಗೂ ಪ್ರಾಥಮಿಕ ವಿದ್ಯಾಭ್ಯಾಸ ಕೊಡಬೇಕೆಂದು ವಾಗ್ದಾನ ಮಾಡಿದ್ದಾರೆ. ಹೀಗಿರುವಲ್ಲಿ ತಾಲ್ಲೂಕು ಬೋರ್ಡಿಗೆ ಇದನ್ನು ವಹಿಸಿದರೆ ನಿಮ್ಮ ಉದ್ದೇಶ ಸಾರ್ಥಕವಾಗುತ್ತದೆಯೇ ? ಈ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ, ತಾಲ್ಲೂಕು ಬೋರ್ಡ್‌ಗಳು ಈ ಕೆಲಸವನ್ನು ವಹಿಸುವುದಕ್ಕೆ ಮುಂದೆ ಬರುತ್ತವೆಯೇ ! ಅವರ ಆಡಳಿತಕ್ಕೆ ವಹಿಸಿದರೆ ಪರಿಣಾಮಕಾರಿಯಾಗಿ ಅವು ಕೆಲಸ ನಿರ್ವಹಿಸಬಲ್ಲವೇ ಎಂಬುದನ್ನು ಸರ್ಕಾರ ಯೋಚನೆ ಮಾಡಬೇಕಾಗಿತ್ತು. ಅದನ್ನು ಯೋಚಿಸದೆ ಈರೀತಿ ತೀರ್ಮಾನ ತೆಗೆದುಕೊಂಡಿದ್ದು ಬಹಳ ಅನ್ಯಾಯವೆಂದು ಹೇಳುತ್ತೇನೆ. ಏಕೆಂದರೆ ತಮಗೆ ಗೊತ್ತಿದೆ ; ಈಗಲೂಕೂಡ ಅತೃಪ್ತಿಯಿಂದಾಗಿ ಉಪಾಧ್ಯಾಯರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂಬುದು. ಹೀಗಿರುವಲ್ಲಿ, ತಾಲ್ಲೂಕ್ ಬೋರ್ಡಿಗೆ ಅವರ ಯೋಗಕ್ಷೇಮವನ್ನು ವಹಿಸಿದರೆ, ಅವರೂ ರಾಜಕೀಯ ಸೋಂಕಿಗೆ ಸಿಕ್ಕಿ, ಶಿಕ್ಷಣ ಮಟ್ಟ ಅಧೋಗತಿಗೆ ಬರುವಂತಾಗುತ್ತದೆಂದು ಹೇಳುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಮದ್ರಾಸಿನಲ್ಲಿ ಹೇಗಿದೆ ?

ಶ್ರೀ ಜಿ. ವೆಂಕಟೇಗೌಡ.—ಮದ್ರಾಸಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ವ್ಯವಸ್ಥೆಯಲ್ಲಿ ಸರಿಯಾಗಿ ನಡೆಯುತ್ತಿದೆಯೆಂದರೆ, ಇಲ್ಲಿಯೂ ಹಾಗೆಯೇ ನಡೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಪ್ರಾಥಮಿಕ ವಿದ್ಯಾಭ್ಯಾಸದ ಹೊಣೆ ಸರ್ಕಾರದವರ ಮೇಲೆ ಬಹಳ ಗುರುತರವಾದುದಾಗಿದೆ. ರಾಜ್ಯಾಂಗದ 45ನೆಯ ಆರ್ಟಿಕಲ್ ಪ್ರಕಾರ 1960ನೆಯ ಇಸವಿಯ ಹೊತ್ತಿಗೆ ಈ ಕಾರ್ಯ ನಿರ್ವಹಿಸಬೇಕಾಗಿತ್ತು. ಅಂತಹದನ್ನು ನಿಮಗೇ ಇದುವರೆಗೂ ಸಾಧನೆ ಮಾಡಲಾಗಿಲ್ಲ. ಪರಿಸ್ಥಿತಿ ಹೀಗಿರುವಾಗ, ಈಗ ತಾಲ್ಲೂಕು ಬೋರ್ಡಿಗೆ ವಹಿಸಿದರೆ, ಅವರು ಸಾಧನೆ ಮಾಡಬಲ್ಲರೇ ಎಂಬುದನ್ನು ನೀವೇ ಯೋಚನೆಮಾಡಿ. ಈಗಲೂ ಸರ್ಕಾರದವರು ಇದನ್ನು ಪುನರ್ವಿಮರ್ಶೆಮಾಡಿ ತಮ್ಮ ತೀರ್ಮಾನವನ್ನು ಬದಲಾಯಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಉಪಾಧ್ಯಾಯರುಗಳು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕೆಂದರೆ ಅವರನ್ನು ರಾಜಕೀಯದ ಸೋಂಕಿಗೆ ಗುರಿಮಾಡಬಾರದು. ಅವರು ತಮ್ಮ ಕರ್ತವ್ಯವನ್ನು ಪರಿಪೂರ್ಣವಾಗಿ, ಪರಿಣಾಮಕರವಾಗಿ ಮಾಡುವ ವ್ಯವಸ್ಥೆಯನ್ನು ಕಲ್ಪಿಸಬೇಕು. ಈ ದೃಷ್ಟಿಯಿಂದ ಸರ್ಕಾರದವರೇ ಈ ಹೊರೆಯನ್ನು ವಹಿಸಬೇಕೆಂದು ಹೇಳುತ್ತೇನೆ.

ಆಮೇಲೆ ಶ್ರೀಮಾನ್ ಶಿವಪ್ಪನವರು ಹೇಳಿದ ಹಾಗೆ......................

ಶ್ರೀ ಅಣ್ಣಾರಾವ್ ಗಣಮುಖಿ.—ಹಣಸಹಾಯ ಶೇಕಡ 100ರಷ್ಟು ತಾಲ್ಲೂಕು ಬೋರ್ಡಿಗೆ ಕೊಟ್ಟು ಅವರು ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಜಿ. ವೆಂಕಟೇಗೌಡ.—ಶೇಕಡ 100 ರಷ್ಟು ಗ್ರ್ಯಾಂಟೂ ಕೊಟ್ಟು ಅಧಿಕಾರವನ್ನು ಏಕೆ ಕೊಡಬೇಕು ! ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಪ್ರಾಥಮಿಕ ಶಿಕ್ಷಣದ ಬಗ್ಗೆ ಈರೀತಿಯಲ್ಲಿ ಒಂದು ನಿರ್ದಿಷ್ಟವಾದ ತೀರ್ಮಾನ ಕೈಗೊಳ್ಳಬೇಕೆಂದು ಹೇಳುತ್ತೇನೆ. ಈಗ ಮಾಡಿರುವ ತೀರ್ಮಾನ ಸರಿಯಾಗಿಲ್ಲ.

ಆಮೇಲೆ, ಸಂಸ್ಥಾನದಾದ್ಯಂತ ನೀತಿನಿಯಮಗಳ ವಿಷಯದಲ್ಲಿ ಏಕರೂಪತೆಯನ್ನು ತರಬೇಕು ಎಂದು ಹೇಳುತ್ತೇನೆ. ಒಂದೊಂದು ಭಾಗದಲ್ಲಿಯೂ ಭಿನ್ನಭಿನ್ನವಾದ ರೂಲ್ಸ್‌ಗಳಿವೆ. ಗ್ರ್ಯಾಂಟ್-ಇನ್-ಏಡ್ ರೂಲ್ಸ್‌ಗಳೇ ಆಗಲಿ, ಕಟ್ಟಡಗಳನ್ನು ಕಟ್ಟಿಸುವುದೇ ಆಗಲಿ ಒಂದೇವಿಧವಾದ ನಿಯಮಗಳಿಲ್ಲ. ಆದಷ್ಟು ಬೇಗನೆ ಎಲ್ಲಾ ಕಡೆಯಲ್ಲೂ ಒಂದೇರೀತಿಯಾಗಿರುವಂತೆ ಮಾಡಬೇಕೆಂದು ಹೇಳುತ್ತೇನೆ.

ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವುದರಲ್ಲಿಯೂ, ತರಪೇತು ಹೊಂದಿರುವ ಉಪಾಧ್ಯಾಯರುಗಳನ್ನೇ ನೇಮಕಮಾಡಿಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ನನಗೆ ತಿಳಿದುಬಂದಿರುವಂತೆ ಈಗ ಸುಮಾರು ಎರಡು ವರ್ಷಗಳ ಹಿಂದೆ ತರಪೇತಾಗಿ ಅರ್ಜಿ ಹಾಕಿಕೊಂಡಿದ್ದರೂ ಅವರನ್ನು ನೇಮಕ ಮಾಡಿಲ್ಲ. ತರಪೇತಾಗಿಲ್ಲದಿರುವವರನ್ನೇ ತೆಗೆದುಕೊಂಡಿದ್ದಾರೆ. ಇನ್ನು ಮೇಲಾದರೂ ತರಪೇತಾಗಿರುವವರಿಗೇ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ.

ಸ್ತ್ರೀಯರ ವಿದ್ಯಾಭ್ಯಾಸದ ವಿಷಯದಲ್ಲಿ ಹೆಚ್ಚಿಗೆ ಪ್ರಾಶಸ್ತ್ಯವನ್ನು ಕೊಡಬೇಕೆಂದು ಹೇಳುತ್ತಿದ್ದೇವೆ. ಅಂತಹದರಲ್ಲಿ ಎಷ್ಟರಮಟ್ಟಿಗೆ ಕೆಲಸ ನಡೆದಿದೆಯೆಂಬ ಪರಿಶೀಲನೆ ಮಾಡುವುದಾದರೆ, ಕಾರ್ಯತಃ ಪ್ರಗತಿ ಅಷ್ಟಾಗಿ ಆಗಿಲ್ಲವೆಂದು ಹೇಳಬಹುದು.

ಇನ್ಸ್‌ಪೆಕ್ಟರುಗಳನ್ನು ಮತ್ತು ಡೆಪ್ಯುಟಿ ಇನ್ಸ್‌ಪೆಕ್ಟರುಗಳನ್ನು ನೇಮಕ ಮಾಡುವುದರಲ್ಲಿ ಶಾಲೆಗಳ ಸಂಖ್ಯೆಗೆ ತಕ್ಕಂತೆ ನೇಮಿಸುವುದು ಅವಶ್ಯಕ. ಹಾಗಿಲ್ಲದೆ ಒಂದು ಕಡೆ 50 ಶಾಲೆಗೆ ಒಬ್ಬರು ಇನ್ಸ್‌ಪೆಕ್ಟರಿರುವುದು, ಇನ್ನೊಂದು ಕಡೆ ಒಂದು ತಾಲ್ಲೂಕಿಗೆ ಒಬ್ಬರೇ ಇನ್ಸ್‌ಪೆಕ್ಟರು ಎಂದು ಮಾಡಿರುವುದು ಸರಿಯಲ್ಲ. ಒಂದೊಂದು ತಾಲ್ಲೂಕಿಗೂ ಒಬ್ಬೊಬ್ಬರು ಇನ್ಸ್‌ಪೆಕ್ಟರು ಇರಬೇಕೆಂಬ Territorial Jurisdiction ತೆಗೆದುಹಾಕಿ, ಶಾಲೆಗಳ ಸಂಖ್ಯೆಗನುಗುಣವಾಗಿ ಇನ್ಸ್‌ಪೆಕ್ಟರುಗಳನ್ನು ನೇಮಿಸಬೇಕೆಂದು ಹೇಳುತ್ತೇನೆ.

ಆಮೇಲೆ, ಈ ಇಲಾಖೆಯ ಕಾರ್ಯ ಚಟುವಟಿಕೆಯ ವಿಷಯವನ್ನು ಕುರಿತು ಹೇಳುವುದಾದರೆ ಮಾನ್ಯ ವಿದ್ಯಾ ಮಂತ್ರಿಗಳೇನೋ ಬಹಳ ಆಸಕ್ತಿಯಿಂದ ದುಡಿಯುವವರಾಗಿದ್ದಾರೆ. ಅದೇ ರೀತಿ ಇಲಾಖೆಯಲ್ಲಿಯೂ ಆಸಕ್ತಿ, ಕಾರ್ಯೋತ್ಸಾಹ ಕಂಡು ಬರಬೇಕು. ಇದನ್ನು ಉಂಟುಮಾಡುವುದು ಮೇಲಿನ ಅಧಿಕಾರಿಗಳ ಕರ್ತವ್ಯವೆಂದು ನಾನು ಹೇಳುತ್ತೇನೆ.

ವಿದ್ಯಾಭ್ಯಾಸದ ಡೈರೆಕ್ಟರವರಿಗೆ ಇರತಕ್ಕ ಕೆಲಸದ ಹೊರೆ ವಿಪರೀತವಾಗಿದೆ. ಒಂದು ಕಡೆ ಪ್ರೈಮರಿ ವಿದ್ಯಾಭ್ಯಾಸ, ಇನ್ನೊಂದು ಕಡೆ ಸೆಕೆಂಡರಿ ವಿದ್ಯಾಭ್ಯಾಸ, ಮೇಲಾಗಿ ಯೂನಿವರ್ಸಿಟಿಯ ಸ್ವಲ್ಪ ಭಾಗ—ಇವೆಲ್ಲಾ ಅವರ ಮೇಲೆಯೇ ಬಿದ್ದಿದೆ. ಇವಿಷ್ಟನ್ನೂ ಒಬ್ಬರೇ ಡೈರೆಕ್ಟರ್ ಅವರು ನಿರ್ವಹಿಸುವುದು ಕಷ್ಟ. ಆದುದರಿಂದ ಜಂಟಿ ಡೈರೆಕ್ಟರುಗಳನ್ನಾಗಲಿ ಅಥವಾ ಜಿಲ್ಲೆಗೊಂದರಂತೆ ಒಬ್ಬ ಅಸಿಸ್ಟೆಂಟ್ ಡೈರೆಕ್ಟರುಗಳನ್ನಾಗಲೀ ನೇಮಿಸಬೇಕೆಂದು ಹೇಳುತ್ತೇನೆ. ಹೀಗೆ ಮಾಡುವುದಾದರೆ, ನೀವು ಈ ವರ್ಷ ಹಾಕಿಕೊಂಡಿರುವ 13 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಆಮೇಲೆ ಹೈಸ್ಕೂಲುಗಳನ್ನು ಕೊಡತಕ್ಕ ವಿಚಾರದಲ್ಲಿ ಒಂದೆರಡು ಸಲಹೆಗಳನ್ನು ಕೊಡಬಯಸುತ್ತೇನೆ. ಎಲ್ಲಿ ಹೈಸ್ಕೂಲುಗಳಿಲ್ಲವೋ ಅಲ್ಲಿಗೆ ಹೈಸ್ಕೂಲು ಕೊಡಲು ಸರ್ಕಾರದವರು ಸಿದ್ಧರಾಗಿದ್ದಾರೆಂದು ಮಂತ್ರಿಗಳು ಹೇಳಿದರು. ಆದರೆ ತಮಗೆ ಗೊತ್ತಿರುವ ಹಾಗೆ ರೆವಿನ್ಯೂ ಟೆರಿಟೋರಿಯಲ್ ಜ್ಯೂರಿಸ್‌ಡಿಕ್ಷನ್ ಮೇಲೆ ತಾವು ಈಗ ಕೊಡುತ್ತಿದ್ದೀರಿ. ಇದರಿಂದಾಗಿ ಒಂದು ಕಡೆ 300 ಚದರಮೈಲಿಗೊಂದು ಹೈಸ್ಕೂಲಿದೆ, ಇನ್ನೊಂದು ಕಡೆ 1300 ಚದರ ಮೈಲಿಗೊಂದಿದೆ. ಗೋರವಾಲಾ ಕಮಿಟಿಯವರೂ ಕೂಡ ಇದನ್ನು ಸರಿಮಾಡಬೇಕೆಂದು ಅಭಿಪ್ರಾಯಪಟ್ಟಿದ್ದರು ; ಇನ್ನೂ ಮಾಡಿಲ್ಲ. ಕೆಲವು ದೊಡ್ಡ ತಾಲ್ಲೂಕುಗಳಿಗೆ ಒಂದೆರಡು ಹೈಸ್ಕೂಲುಗಳನ್ನು ಕೊಡಬಹುದು. ಆದರೆ ಅದರ ಅಗತ್ಯವಿದೆಯೇ ಇಲ್ಲವೇ ನೋಡಿಕೊಡುವುದು ಅವಶ್ಯವೆಂದು ಹೇಳುತ್ತೇನೆ. ನಮ್ಮ ಕಡೆ 1300 ಚದರ ಮೈಲಿಗೊಂದು ಹೈಸ್ಕೂಲಿದೆ. ಡೈರೆಕ್ಟರವರು ಬಂದು ಇದನ್ನೆಲ್ಲಾ ಪರಿಶೀಲನೆ ಮಾಡಿ, ಅಲ್ಲಿನ ಜನರಿಗೆ ಸ್ಕೂಲನ್ನು ತೆರೆಯಲು ಶಕ್ತಿಯಿಲ್ಲವೆಂದು ಕಂಡು ಬಂದರೆ, ಸರ್ಕಾರದವರು ಸ್ಕೂಲುಗಳನ್ನು ದಯಪಾಲಿಸಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ಅಗತ್ಯ ಮತ್ತು ಹೆಚ್ಚಿನ ಜನರಿಗೆ ಅನನುಕೂಲವಾಗುತ್ತಿರುವುದನ್ನು ಗಮನಿಸಿ ಹಿಂದುಳಿದ ಭಾಗಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಷಯ. ನಮ್ಮ ತಾಲ್ಲೂಕಿನ ಎಲ್ಲಾ ಪ್ರೈಮರಿ ಶಾಲೆಗಳನ್ನೂ ಸರ್ಕಾರದವರು ತೆಗೆದುಕೊಂಡಿರುತ್ತಾರೆ. ಆದರೆ, ಇನ್ನೂ allocation statement ಪರಿಪೂರ್ಣವಾಗಿ ಆಗಿಲ್ಲ. Revised scales of pay ಇನ್ನೂ ಅವರಿಗೆ ಸಂದಾಯವಾಗಿಲ್ಲ. ಏಕೆಂದರೆ, ಸುಮಾರು 20, 25 ವರ್ಷ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಅವರು ಸರ್ವೀಸ್ ಹಾಕಿದ್ದಾರೆ. ಆ ಸರ್ವೀಸನ್ನು ಪೆನ್ಷನ್‌ಗೆ ಅಥವಾ ವೈಟೇಜ್‌ಗೆ ತೆಗೆದುಕೊಳ್ಳದಿದ್ದರೆ ಬಹಳ ಕಷ್ಟವಾಗುತ್ತದೆ. ಇದನ್ನು ಗಣನೆಗೆ ತೆಗೆದುಕೊಳ್ಳಬೇಕು. ಮದರಾಸ್ ಡಿಸ್ಟ್ರಿಕ್ಟ್ ಬೋರ್ಡಿನವರು ಮದರಾಸ್ ಸರ್ಕಾರದ ರೂಲ್ಸ್ ಪ್ರಕಾರ ನೇಮಕ ಮಾಡುತ್ತಿದ್ದರು ಎಂಬುದನ್ನು ಅವರು ಗಣನೆಗೆ ತಂದುಕೊಂಡರೆ ಒಳ್ಳೆಯದು. ಅಲ್ಲಿ ಏನು ಒಂದು ಅನುಕೂಲ ಸಿಕ್ಕುತ್ತಿತ್ತೋ ಅದನ್ನು ಹಾಳು ಮಾಡುವುದು ಬೇಡ ಎಂದು ಸೂಚನೆ ಮಾಡುತ್ತಾ ಇದ್ದೇನೆ. ಅಷ್ಟಾದರೂ ಅನುಕೂಲಮಾಡಿ ಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ವಿದ್ಯಾ ಮಂತ್ರಿಗಳಿಗೆ ಪ್ರಾರ್ಥನೆ ಮಾಡುತ್ತೇನೆ.

ಪೆನ್ಷನ್ ವಿಚಾರದಲ್ಲಿ ಮೊನ್ನೆ ಮಾನ್ಯ ಹಣಕಾಸಿನ ಸಚಿವರು ತಮ್ಮ ಬಡ್ಜೆಟ್ ಭಾಷಣದಲ್ಲಿ ಟೆಂಪೊರರಿ ಸರ್ವಿಸ್ ಇದ್ದರೆ ಅದನ್ನು ಕೂಡ ಗಣನೆಗೆ ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. Aided Institutionನಲ್ಲಿ ಸರ್ವೀಸ್ ಹಾಕಿದ್ದರೆ ಅದನ್ನು ತೆಗೆದುಕೊಳ್ಳುವುದಿಲ್ಲ ಎಂದು clarificationನಲ್ಲಿ ಹೇಳಿದರು. ಇದು ಬಹಳ ಅನ್ಯಾಯವಾಗುತ್ತದೆ. ಖಾಸಗೀ ಇನ್ಸ್ಟಿಟ್ಯೂಷನ್‌ನಲ್ಲಿ ಅಥವಾ ಲೋಕಲ್ ಬೋರ್ಡ್ ಇನ್ಸ್ಟಿಟ್ಯೂಷನ್‌ನಲ್ಲಿ ಸರ್ವೀಸ್ ಹಾಕಿದ್ದರೆ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎನ್ನುವುದು ನಿಜವಾಗಿಯೂ ನ್ಯಾಯವಾದುದಲ್ಲ. ಅದನ್ನು ತೆಗೆದುಕೊಂಡರೆ ಪೂರ್ತಿ ಪೆನ್ಷನ್ ಸಿಕ್ಕಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತೇನೆ. ಅಲ್ಲದೆ ಪೆನ್ಷನ್ ಸರಿಯಾಗಿ ವಿಲೇವಾರಿ ಆಗುತ್ತಿಲ್ಲ. ನಮಗೆ ಗೊತ್ತಿರುವ ಹಾಗೆ 1955-56-1956-57 ರಲ್ಲಿ ರಿಟೈರ್ ಆದ ಉಪಾಧ್ಯಾಯರುಗಳಿಗೆ ಇನ್ನು ಪೆನ್ಷನ್ ಸಿಕ್ಕಿಲ್ಲ. ಇದನ್ನು ಪರಿಶೀಲನೆ ಮಾಡಿ ಆದಷ್ಟು ತೀವ್ರಗತಿಯಿಂದ ವಿಲೇವಾರಿ ಆಗುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಕೇಳುತ್ತಾ ಇದ್ದೇನೆ.

ಅಲ್ಲದೆ ಮೊದಲೇ ಹೇಳಿದ ಹಾಗೆ ಪ್ರಾಥಮಿಕ ಶಿಕ್ಷಣದ ಮಟ್ಟವನ್ನು ಹೆಚ್ಚಿಸಲಿಕ್ಕೂ ಆ ಉಪಾಧ್ಯಾಯರುಗಳು ತಮ್ಮ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ನೆರವೇರಿಸಲಿಕ್ಕೂ ಒಂದು ವ್ಯವಸ್ಥೆ ಏರ್ಪಾಡಾಗಬೇಕು ಎಂದು ನಾನು ಪ್ರಾರ್ಥನೆ ಮಾಡುತ್ತಾ ಇದ್ದೇನೆ

ಕಲಾಶಾಲೆಗಳು ಅಥವಾ ತಾಂತ್ರಿಕ ಶಾಲೆಗಳನ್ನು ಏರ್ಪಡಿಸತಕ್ಕ ವಿಚಾರದಲ್ಲಿ ಶಿವಪ್ಪನವರು ಒಂದು ಮಾತನ್ನು ಹೇಳಿದರು. ಒಂದು ಜಿಲ್ಲೆಗೆ ಒಂದು ಶಾಲೆ ಕೊಡಬೇಕೆಂದು ಸರ್ಕಾರದ ನಿಯಮ ಇಟ್ಟುಕೊಂಡಿದ್ದಾರೆ. ಅವರು ಈ ನಿಯಮವನ್ನು ಕೆಲವು ಸಾರಿ ಉಲ್ಲಂಘನೆ ಮಾಡಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಬೆಂಗಳೂರಿನಲ್ಲಿ ಇದ್ದರೂ ಕೂಡ ಚನ್ನಪಟ್ಟಣದಲ್ಲಿ ಇನ್ನೊಂದು ತೆರೆದಿದ್ದಾರೆ. ನಾವು ಮಾಡಲಿಲ್ಲ, ಹಿಂದಿನವರು ಮಾಡಿದರು ಎನ್ನುವ ವಾದವನ್ನು ನಾನು ಒಪ್ಪುವುದಿಲ್ಲ. ಸರ್ಕಾರದವರು ನಿಯಮಕ್ಕನುಸಾರವಾಗಿ ನಡೆದರೆ ಯಾರೂ ಕೇಳುವುದಕ್ಕಾಗುವುದಿಲ್ಲ. ಆ ರೀತಿ ಇಲ್ಲದೇ ಇದ್ದಮೇಲೆ ಎಲ್ಲಾ ವಿಧವಾದ

(ಶ್ರೀ ಜಿ. ವೆಂಕಟೇಗೌಡ)

ಗೊಂದಲಕ್ಕೆ ಕಾರಣವಾಗುತ್ತದೆ. ಒಂದು ಸ್ಪಷ್ಟವಾದ ರೀತಿ ನೀತಿ ಗೊತ್ತುಮಾಡಿದಮೇಲೆ ಅದನ್ನು ಕಾರ್ಯತಃ ಜಾರಿಗೆ ತರಲಕ್ಕೆ ಬೇಕಾದ ವ್ಯವಸ್ಥೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri MAHMOOD SHARIFF** (Broadway).—Mr. Speaker, Sir, it has been generally accepted that whatever may be the case in regard to other Departments of public activity, the educational policy and programme should not be subjected to any drift. The reason is that it has been accepted that education provides the basis of prosperity of not only the society but also of the country. This is particularly so after the achievement of our Independence when we have accepted that our goal should be a welfare society, a rightful welfare society and parliamentary system should be the form of Government to achieve this end. This question deals with our students, our young folk, who I may characterise are greater than the greatest asset of our country, those on whom it may be shortly the mantle of leadership and responsibility is going to fall, and those about whom we should regard ourselves to be the trustees tu see that their brilliant future is ensured consistent with the tradition of our country. It seems to me, Sir, that fundamentally, the system of education and programme that we are pursuing in the behalf is wrong. If it were not so, and if supposing that we claim it to be right and just and if you claim that after the achievement of Independance we have been trying to pursue the educational policy on rightful lines, then I do not think that psychosis that is now appearing among our students, the psychosis of unrest, moral delinquency which is noticeable in some of our universities in India, should not have happened and the U.G.C. who are the guardians to speak about the programme and policy of education, those who are sponsors of new schemes, I do not think, they would have sent only recently—about last month, a committee of experts in order to probe into the frustration which is causing so much disappointment and so much unrest and disquiet among our young people—boys and girls—may I also include girls? I do not think they have been sent in order to examine the local persons who are regarded to be experts in the line. It seems to me Sir, that our system as I just now said, curriculum of studies seems to be rather of a lop-sided kind and should be substituted for by a new pattern which should give scope for the development of the personality of our young people, should give scope for that integration of the intellectual, physical and moral equipoise, so to speak, so that they may conduct themselves in a spirit of sanity, in a spirit of rightful patriotism to the country. That is why I say that our educational policies are lopsided. It seems to me that the hall-mark of our traditional progress—traditional so far as India is concerned, that hall-mark is going to be lost because there are two or three circumstances which, with your permission, I beg to place before you.

Firstly, Sir, we are paying more attention to intellect than to character-building, which as a matter of fact is the real basis of all rightful citizenship, the characteristic of a rightful citizen. If you analyse the situation, you will find that so far as the intellect is concerned, every thing that is going to be conductive of the acquisition of greater intellect is more prominent and that we are not giving the rightful place for the building of character.

4-30 P.M.

So far as science and scientific technology are concerned, they have upset our life. The scientific development for which we take so much pride is responsible for the production of missiles and hydrogen bombs. If anything goes wrong the whole world is reduced itself to shambles and peace will be based on the graveyard of humanity. Secondly, we are going to become an industrial country and it should be so. Till now this aspect was not given prominence but on account of the fact that the trend of the whole world is towards industrialisation it is very necessary that in our age we have to adjust ourselves to new trends. Supposing that is going to happen—and it is

going to happen—I feel that the viciousness is going to invade our society. I feel that many people who are living in a peaceful atmosphere will go to towns. So, these two dangers are there; first regarding advancement of science and technology and the results flowing from them and secondly the industrial advancement which will induce the people to leave rural areas. We are able to see the viciousness of this in America and most probably it may invade our country also. Let us adjust now and give prominence to ethical and spiritual side of the aspect. If we do not do that and if we are to follow other countries, it is not good. We should represent the intellect and it is necessary for us to ponder over this and examine the programme and policies which are going to be put into practice and see whether they are in consonance with our traditions.

The Government are—as has appeared in the papers—about to decide the taking over of colleges. I do not know what the Hon'ble Minister for Education is going to say about it. It seems to me that the Government is going to do a great injustice if they take over colleges except the post-graduate studies and research. This question was mooted in the Syndicate and there was a lot of controversy about it. Some people considered that this move was really conducive to promoting the activities of education and there was another set of people who were of the view that it is going to be the hot-bed of politics. I for one strongly condemn the attitude of the Government if they have decided like that. So far as our university is concerned in 1916 we wanted to have our own autonomous university and some of our experts were sent out to study what should be the true purpose of the university. They studied the matter that happened in other countries and they drafted a programme. Only after that our university became a teaching as well as an examining university. After the matter was referred to Sri Lakshmanaswamy Mudaliar, the Government is rather in a hurried mind to adhere to the recommendation of that Committee. I do not think it is the Government's aim to depart from the rightful course, *i.e.*, teaching as well as examining body. If that is not so, then politics is going to enter education. This is a thing which I want to suggest.

Comming to the university, we have been taking pride ourselves that our universities are autonomous bodies. Prior to integration several committees were appointed and a lot of money was spent over those committees in order to devise ways and means for keeping the university autonomous. It is nothing but a misnomer. Only recently when the people in Tumkur wanted to start a law college wherein they had no teachers, no equipment nor any wherewithal, we went there to examine whether in the circumstances Tumkur should have a law college of its own. We deliberated over this question and regard being had to the non-existence of equipments, staff, etc., we found that it was not necessary to start a law college there.

Sri M. C. NARASIMHAN.—Did you want to start a college anywhere else?

Sri MAHMOOD SHARIFF.—It is not necessary now. After that when the university said that it was not necessary, the matter was taken to the High Court and the writ petition was dismissed there. Was it necessary or just on the part of the Government to have given affiliation to that college? When the number of committees that were appointed have stated that the university should be autonomous, this action of the Government is contrary to the spirit of it.It appers to be a very strange If you want development of colleges this kind of interference should not be there. If colleges are going to be taken over by the Government it is going to be the hot-bed of politics. Excuse me for the strong terms used. I hope the decision that has been taken in this behalf will be once again cancelled and let us adhere to a thing which is sane. Let us have a sane view.

ಶ್ರೀ ಪೈ. ವೀರಪ್ಪ (ಹೊಳೆನರಸೀಪುರ).—ಮಾನ್ಯ ಅಧ್ಯಕ್ಷರೇ ಈಗಾಗರೇ ಅನೇಕ ಮಾನ್ಯ ಸದಸ್ಯರುಗಳು ವಿದ್ಯಾಭ್ಯಾಸದ ವಿಚಾರಗಳಲ್ಲಿ ಕೆಲವು ಅಭಿಪ್ರಾಯ

(ಶ್ರೀ ವೈ. ವೀರಪ್ಪ)

ಗಳನ್ನು ವ್ಯಕ್ತಪಡಿಸಿದ್ದಾರೆ. ಈಗ ಇರತಕ್ಕ ವಿದ್ಯಾಭ್ಯಾಸದ ಕ್ರಮಗಳಲ್ಲಿ ಲೋಪ ದೋಷಗಳಿವೆ ಎಂದು ಒಪ್ಪುವವರಲ್ಲಿ ನಾನೂ ಒಬ್ಬ. ಒಂದು ದೇಶ, ಅಥವಾ ಒಂದು ರಾಜ್ಯದ ಪ್ರಗತಿ ಆ ದೇಶದ ವಿದ್ಯಾಭ್ಯಾಸದ ಕ್ರಮವನ್ನು ಅನುಸರಿಸುತ್ತದೆ. 10 ವರ್ಷಗಳಲ್ಲಿ ಒತ್ತಾಯ ಶಿಕ್ಷಣವನ್ನು ಕೊಡಬೇಕು ಎಂದು ರಾಜ್ಯಾಂಗದಲ್ಲಿ 48ನೆಯ ಆರ್ಟಿಕಲ್ ಪ್ರಕಾರ ವಿಧಾಯಕವಾಗಿದೆ. ಆದರೆ ಇಲ್ಲಿಯತನಕ ನಾವು ಇದರಲ್ಲಿ ಯಶಸ್ವಿಗಳಾಗಿಲ್ಲ. ವಿದ್ಯಾಭ್ಯಾಸದ ಇಲಾಖೆಗೆ ಸುಮಾರು 13¼ ಕೋಟಿ ರೂಪಾಯಿಗಳನ್ನು ಮುಂದಿನ ವರ್ಷ ನಾವು ಖರ್ಚು ಮಾಡುತ್ತೇವೆ. ಅದನ್ನು ಖರ್ಚು ಮಾಡುವಾಗ ಅದರ ಪ್ರತಿಫಲ ಯಾವ ರೀತಿ ಜನತೆಯ ಮೇಲೆ ಪರಿಣಾಮಕಾರಿಯಾಗಬೇಕು ಎಂಬುದನ್ನು ಎರಡು ರೀತಿಯಿಂದ ನೋಡಬೇಕು. ಈಗ ಇರುವ ವಿದ್ಯಾಭ್ಯಾಸದ ಪರಿಸ್ಥಿತಿ ಮತ್ತು ವಿದ್ಯಾಭ್ಯಾಸದಲ್ಲಿರತಕ್ಕ ಲೋಪ ದೋಷಗಳು ಏನಿವೆ, ಅವುಗಳನ್ನು ಹೋಗಲಾಡಿಸಿ ಮುಂದಿನ ಜನಾಂಗವನ್ನು ಯಾವ ರೀತಿ ನಿರೂಪಿಸಬೇಕು ಎಂಬ ಎರಡು ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು. ಈ ದೃಷ್ಟಿಯಿಂದ ನಾನು ಹೇಳುತ್ತೇನೆ. ಪ್ರೀ ಪ್ರೈಮರಿ ಅಥವಾ ನರ್ಸರಿ ಎಜುಕೇಷನ್ ಬಗ್ಗೆ ನಾವು ಕೆಲವು ಹೊರ ದೇಶದ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಉತ್ತಮ. ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳಲ್ಲಿ ಪ್ರೈಮರಿ ಎಜುಕೇಷನ್ನಿಗೆ ಮುನ್ನ ನರ್ಸರಿ ಎಜುಕೇಷನ್ನಿಗೆ ಹೆಚ್ಚಿಗೆ ಉತ್ತೇಜನ ಕೊಟ್ಟು ಜಯಶೀಲರಾಗಿದ್ದಾರೆ. ಅಂಥ ಕ್ರಮ ನಮ್ಮ ದೇಶದಲ್ಲಿ ಅತಿ ಮುಖ್ಯವಾಗಿರಬೇಕು. ಕಾರಣ ನಮ್ಮ ರೈತನ ಮಕ್ಕಳು ದೇಶದ ಜನತೆಯ ಮಕ್ಕಳು. ಅವರಿಗೆ ವಿದ್ಯಾಭ್ಯಾಸ ಕಲಿಯುವುದಕ್ಕೆ ಇರತಕ್ಕ ಅವಕಾಶ ಬಹಳ ಕಡಿಮೆ. ಏತಕ್ಕೆಂದರೆ ನಮ್ಮ ದೇಶ ಬಡವರ ದೇಶ, ವ್ಯವಸಾಯಗಾರರು ಇರುವ ದೇಶವಾಗಿದೆ. ಆ ದೃಷ್ಟಿಯಿಂದ ಸರ್ಕಾರದವರು ನರ್ಸರಿ ಎಜುಕೇಷನ್ನಿಗೆ ಉತ್ತೇಜನಕೊಟ್ಟರೆ ಒಳ್ಳೆಯ ವಾತಾವರಣವನ್ನು ಕಲ್ಪಿಸಿದಂತಾಗುತ್ತದೆ; ಮುಂದಿನ ಜನಾಂಗ ಒಳ್ಳೆಯ ಜನಾಂಗವಾಗಿ ಬಾಳುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ಈ ಎರಡು ಸನ್ನಿವೇಶಗಳು ಒದಗಬೇಕು. ಹಳ್ಳಿಗಳಲ್ಲಿ ಮತ್ತು ನಗರಗಳಲ್ಲಿ ಪ್ರತ್ಯೇಕವಾಗಿ ನರ್ಸರಿ ಸ್ಕೂಲುಗಳನ್ನು ಅಲ್ಲಲ್ಲಿ ತೆಗೆದು 3 ವರ್ಷದಿಂದ 5 ವರ್ಷದವರೆಗಿನ ವಯಸ್ಸಿನ ಹುಡುಗರಿಗೆ ನರ್ಸರಿ ಸ್ಕೂಲಿನ ವಿದ್ಯಾಭ್ಯಾಸದ ಕ್ರಮವನ್ನು ಒತ್ತಾಯವಾಗಿ ಕೊಡಬೇಕಾದುದು ಆವಶ್ಯಕ ಎಂದು ಹೇಳುತ್ತೇನೆ. ಹಳ್ಳಿಗಳಲ್ಲಿ ಒಂದು ಕಡೆ ಹುಡುಗರು ದೊರಕದೆ ಇರಬಹುದು. ಹಳ್ಳಿಗಳಲ್ಲಿ ಮಕ್ಕಳ ತಂದೆ ತಾಯಿಗಳು, ತಮ್ಮ ಆರಂಬದ ಕೆಲಸದಲ್ಲಿ, ವ್ಯವಸಾಯ ಕೆಲಸದಲ್ಲಿ ನಿರತರಾಗಿರುವುದರಿಂದ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಅವಕಾಶವಿಲ್ಲದ್ದರಿಂದ ಹಳ್ಳಿಯಲ್ಲಿರುವ ಪ್ರೈಮರಿ ಸ್ಕೂಲುಗಳಿಗೆ ನರ್ಸರಿ ಸ್ಕೂಲುಗಳನ್ನು ಅಟಾಚ್ ಮಾಡಿ ನರ್ಸರಿ ಸ್ಕೂಲಿನ ವಿದ್ಯಾಭ್ಯಾಸವನ್ನು ಚಿಕ್ಕಮಕ್ಕಳಿಗೆ ಕೊಡುವುದು ಉತ್ತಮ ಎಂದು ತೋರುತ್ತದೆ. ಏತಕ್ಕೆಂದರೆ ಮುಂದಿನ ಜನಾಂಗ ವಿಕಾಸವಾಗಿ ಬೆಳೆಯಬೇಕಾದರೆ ಒಳ್ಳೆಯ ವಾತಾವರಣವನ್ನು ಕಲ್ಪಿಸಬೇಕು. ಮುಖ್ಯವಾಗಿ ರೈತನ ಮನೆಯಲ್ಲಿ ಅಂಥ ವಾತಾವರಣವಿಲ್ಲ.

ನಗರದಲ್ಲಿ ನಡೆಯುವ ವಿದ್ಯಾಭ್ಯಾಸ ಕ್ರಮಕ್ಕೂ ಹಳ್ಳಿಗಳಲ್ಲಿ ನಡೆಯುವ ವಿದ್ಯಾಭ್ಯಾಸ ಕ್ರಮಕ್ಕೂ ಹೋಲಿಸಿ ನೋಡಿದರೆ, ನಗರಗಳಲ್ಲಿ ತರಪೇತಾದ ಉಪಾಧ್ಯಾಯರು ಕೆಲಸಕ್ಕೆ ಸಿಕ್ಕಿರುತ್ತಾರೆ, ಹಳ್ಳಿಯ ಸ್ಕೂಲುಗಳನ್ನು ಗಣನೆಗೆ ತೆಗೆದುಕೊಂಡಾಗ ತರಪೇತಾದ ಉಪಾಧ್ಯಾಯರು ಸಿಕ್ಕುವುದಿಲ್ಲ. ಅಲ್ಲದೆ ಈ ಶಾಲೆಗಳಿಗೆ ಕೊಟ್ಟಿರುವ ಸಲಕರಣೆಗಳನ್ನು ನೋಡಿದರೆ ಅಜಗಜಾಂತರ ವ್ಯತ್ಯಾಸವಿರುತ್ತದೆ. ಹಳ್ಳಿಯಲ್ಲಿ ಉಪಾಧ್ಯಾಯರು ವಾಸ ಮಾಡಲು ಸರಿಯಾದ ಮನೆಗಳಿಲ್ಲದೇ ಇರುವುದು ಒಂದು ಕಾರಣ. ಎರಡನೆಯದು, ಇರತಕ್ಕ ಪ್ರೈಮರಿ ಶಾಲೆಗಳನ್ನು ಪೂರ್ತಿಯಾಗಿ ಜೂನಿಯರ್ ಬೇಸಿಕ್ ಶಾಲೆಗಳನ್ನಾಗಿ ಮಾಡಬೇಕೆಂದು ಬೇಕಾದಷ್ಟು ಏರ್ಪಾಡುಗಳನ್ನು ಮಾಡುತ್ತಿದ್ದಾರೆ. ಡಾಕ್ಟರ್ ರಾಧಾಕೃಷ್ಣನ್‌ಅವರ ವರದಿ, ರೆಡ್ಡಿಯವರ ವರದಿ, ಮೈಸೂರು ಎಜುಕೇಷನ್ ಕಮಿಟಿಯ ವರದಿ, University education committee report, ಹೀಗೆ ಅನೇಕ ವರದಿಗಳು ನಮ್ಮ ಮುಂದೆ ಇವೆ. ಅವುಗಳಲ್ಲಿ ಬಹಳ ಅನುಭವ ಪೂರಿತವಾದ ಅಂಶಗಳು ಒಳಗೊಂಡಿವೆ. ಹಾಗಿದ್ದಾಗ್ಯೂ 'ಮಕ್ಕಿಕಾ ಮಕ್ಕಿ' ರೀತಿಯ ವಿದ್ಯಾಭ್ಯಾಸಕ್ರಮ ನಡೆಯುತ್ತಿದೆ ಎಂದು ಹೇಳಬೇಕಾಗಿದೆ. ಉದಾಹರಣೆಗೆ ಬೇಸಿಕ್ ಎಜುಕೇಷನ್‌ನಲ್ಲಿ ಅನೇಕ ಶಾಲೆಗಳಲ್ಲಿ ಅನೇಕ ರೀತಿಯ craft introduce ಮಾಡಿದ್ದಾರೆ. ಮತ್ತು ಅದಕ್ಕಾಗಿ ಅಲ್ಪಸ್ವಲ್ಪ ಹಣವನ್ನು ಕೂಡ ಕೊಟ್ಟಿದ್ದಾರೆ. ನೇಯ್ಗೆಯ ಕೆಲಸಕ್ಕೆ, ವ್ಯವಸಾಯಕ್ಕೆ, ತೋಟಗಾರಿಕೆ ಇತ್ಯಾದಿಗಳಿಗೆ ಹಣವನ್ನು ಕೊಟ್ಟಿದ್ದಾರೆ. ಆದರೆ ಕೆಲವು ಶಾಲೆಗಳಲ್ಲಿ ನೋಡಿದರೆ, ಹಣವನ್ನು ಹೇಗೆ ಖರ್ಚು ಮಾಡಬೇಕು, ಅವರು ಕೊಂಡುಕೊಳ್ಳತಕ್ಕ ವಸ್ತುಗಳನ್ನು ಹೇಗೆ ಉಪಯೋಗಿಸಬೇಕು ಎನ್ನುವುದೇ ಅವರಿಗೆ ದೊಡ್ಡ ಸಮಸ್ಯೆಯಾಗಿದೆ. ವ್ಯವಸಾಯದ craft ಕೊಟ್ಟಿರುವ ಕಡೆ ಭೂಮಿಇಲ್ಲ ಮತ್ತು ಆ ವಿಷಯದಲ್ಲಿ ತರಪೇತಾದ, ಶಿಕ್ಷಣಕೊಡತಕ್ಕ ಉಪಾಧ್ಯಾಯರಿಲ್ಲ. ಮಡಕೇರಿಯಲ್ಲಿರುವ ಮಲ್ಟಿ-ಪರ್ಪಸ್ ಹೈಸ್ಕೂಲ್‌ನಲ್ಲಿ ಇಂಜಿನಿಯರಿಂಗ್ ಸೆಕ್ಷನ್ ತೆರೆಯಲು 30-35 ಸಾವಿರ ರೂಪಾಯಿ ಖರ್ಚು ಮಾಡಿ ಯಂತ್ರಗಳನ್ನು ತರಿಸಿದ್ದಾರೆ. ಅಲ್ಲಿಗೆ ಕರೆಂಟ್ ಸಿಕ್ಕಿಲ್ಲವೆಂದು ಬಹಳ ತೊಂದರೆ ಪಡುತ್ತಿದ್ದಾರೆ. ಕೆಲವು ಕಡೆ weaving section ತೆರೆದಿದ್ದಾರೆ. ಅಲ್ಲಿ ಸ್ಥಳವಿಲ್ಲ ಮತ್ತು ತರಪೇತಾದ ಉಪಾಧ್ಯಾಯರಿಲ್ಲ. ಹೀಗೆ ನಾವು ಕೊಡತಕ್ಕ ದುಡ್ಡು ಯಾವುದೋ ಒಂದು ರೀತಿಯಲ್ಲಿ ಖರ್ಚಾಗುತ್ತಿದೆಯೇವಿನಾ ಅದರ ಪ್ರತಿಫಲ ಜನಗಳಿಗೆ ಹೋಗುತ್ತಿಲ್ಲ. ಈ ದೃಷ್ಟಿಯಿಂದ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಂಡು ಕೆಲಸ ಮಾಡುವಾಗ ಅದರ ಪ್ರತಿಫಲ ಪರಿಣಾಮಕಾರಿಯಾಗಿರುವಂತೆ ಮಾಡಬೇಕೆಂದು ಹೇಳುತ್ತೇನೆ. The fate of any country depends upon the education of the people of that country. ಇದು ಸರ್ವ ಸಮ್ಮತವಾದ ವಿಷಯ. ದೇಶದಲ್ಲಿ ಅತಿಮುಖ್ಯವಾದ ಇಲಾಖೆ ಎಂದರೆ ವಿದ್ಯಾಭ್ಯಾಸ ಇಲಾಖೆ. ದೇಶದ ಯಾವ ಇಲಾಖೆಯ ಕಾರ್ಯಗಳೇ ಆಗಲಿ ಸರಿಯಾಗಿ ನಡೆಯಬೇಕಾದರೆ ದೇಶದಲ್ಲಿರುವ ಸಮಾಜಕ್ಕೆ ಜನತೆಗೆ ವಿದ್ಯಾಭ್ಯಾಸದ ಅನುಭವ ಚೆನ್ನಾಗಿರಬೇಕು. ಇದಕ್ಕಾಗಿ ಹಳ್ಳಿಯ ಜನರಿಗೂ ಪಟ್ಟಣವಾಸಿಗಳಿಗೂ ಇರುವ ವ್ಯತ್ಯಾಸ ಕಡಮೆಯಾಗಬೇಕು. ಹಳ್ಳಿಯೊಳಗೆ ತರಪೇತಾದ ಉಪಾಧ್ಯಾಯರಿರುವುದಿಲ್ಲ. ಸರಿಯಾದ ಸಲಕರಣೆ

ಗಳೂ, ಸರಿಯಾದ ವಾತಾವರಣವೂ ಇರುವುದಿಲ್ಲ. ಈ ವ್ಯತ್ಯಾಸ ಜಾಗ್ರತೆಯಾಗಿ ಕಡಮೆಯಾಗಲು ಇಲಾಖೆಯವರು ಪ್ರಯತ್ನಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

[MR. SPEAKER in the Chair]

ಈಗ ತರಪೇತಾದ ಉಪಾಧ್ಯಾಯರ ಅಭಾವ ಬಹಳ ಜಾಸ್ತಿಯಾಗಿದೆ. ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಹದಿಮೂರುವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿರಬೇಕಾದರೆ, ತರಪೇತಾದ ಉಪಾಧ್ಯಾಯರುಗಳನ್ನು ಒದಗಿಸುವುದು ಸರ್ಕಾರದವರ ಜವಾಬ್ದಾರಿ. ತರಪೇತಾದ ಉಪಾಧ್ಯಾಯರನ್ನು ಎಲ್ಲ ಶಾಲೆಗಳಿಗೂ ಒದಗಿಸಿ, ಸರಿಯಾದ ಸೌಲಭ್ಯಗಳನ್ನು ಮತ್ತು ಸಲಕರಣೆಗಳನ್ನು ಕೊಡದೆ ದೇಶದ ಎಲ್ಲ ಕಡೆಗಳಲ್ಲಿಯೂ ಕೂಡ basic education ಜಾರಿಗೆ ತರುತ್ತೇವೆ, higher secondary schools ಮಾಡ ತ್ತೇವೆ ಎಂದು ದುಡ್ಡನ್ನು ನಾವುಕಾವಸ್ತೆ ಖರ್ಚುಮಾಡಿ ಬಿಟ್ಟರೆ, ಅದರ ಪ್ರತಿಫಲ ಜನತೆಗೆ ಸರಿಯಾಗಿ ಹೋಗುವುದಿಲ್ಲ. ಆದುದರಿಂದ ದೇಶದ ಎಲ್ಲ ಜಿಲ್ಲೆಗಳಲ್ಲಿಯೂ ಕೂಡ ಈ ಪದ್ಧತಿಯನ್ನು ಜಾರಿಗೆ ಒಂದೇಸಾರಿ ತರುವುದಕ್ಕೆ ಆಗದೆ ಇದ್ದರೆ ಒಂದು phased programme ಹಾಕಿಕೊಂಡು ಒಂದೊಂದು ಜಿಲ್ಲೆಯಲ್ಲಿ ಒಂದೊಂದು ವರ್ಷ ಸಂಪೂರ್ಣವಾಗಿ, ಪರಿಪಕ್ವವಾಗಿ ಮಾಡಿದರೆ ಸರ್ಕಾರದವರು ಖರ್ಚು ಮಾಡುವ ಹಣ ಸಫಲವಾಗುತ್ತದೆ, ಅದಕ್ಕೆ ತಕ್ಕ ಪ್ರಯೋಜನ ಜನತೆಗೆ ಲಭಿಸುತ್ತದೆ.

ಉಪಾಧ್ಯಾಯರುಗಳ ಕೊರತೆಯ ವಿಚಾರವಾಗಿ ಬೇಕಾದಷ್ಟು ಜನರಿಂದ ಕೇಳಿದ್ದೇವೆ. ಈ ಸಭೆಯ ಮಾನ್ಯ ಸದಸ್ಯರೂ ಹೇಳಿದ್ದಾರೆ. ಅದರಲ್ಲಿಯೂ ಮುನಿಸಿಪಲ್ ಹೈಸ್ಕೂಲು ಉಪಾಧ್ಯಾಯರ ಕಷ್ಟ ಬಹಳವಾಗಿದೆ. ಸರ್ಕಾರದವರು ಏನು ಸಂಬಳ ಸಾರಿಗೆ ಮತ್ತು ಸೌಲಭ್ಯಗಳನ್ನು ಕೊಡುತ್ತಾರೆಯೋ ಅದೇ ರೀತಿಯಾಗಿ ಇತರರೂ ಒದಗಿಸಬೇಕೆಂದು instructions ಕೊಟ್ಟಿದ್ದಾರೆ. ಆದರೆ ಕೆಲವು ಕಡೆ ಸರಿಯಾದ ಆದಾಯವಿಲ್ಲದೆ ಉಪಾಧ್ಯಾಯರಿಗೆ ಸಕಾಲದಲ್ಲಿ ಸಂಬಳ ಸಾರಿಗೆಗಳು ಸಿಕ್ಕುತ್ತಿಲ್ಲ. ಇದರಿಂದ ಅವರ ಆಸೆ, ಉತ್ಸಾಹ ಕಡಮೆಯಾಗಿ ಹುಡುಗರಿಗೆ ಶ್ರದ್ಧೆಯಿಂದ ವಿದ್ಯೆಯನ್ನು ಹೇಳಲು ಅಷ್ಟು ಚೆನ್ನಾಗಿ ಆಗುತ್ತಿಲ್ಲ. ವಿಶ್ವವಿದ್ಯಾನಿಲಯದಿಂದ ಕಾಲೇಜುಗಳನ್ನು ಸರ್ಕಾರದವರು ವಹಿಸಿಕೊಳ್ಳಬೇಕೆಂದು ಈಗ ಮನಸ್ಸು ಮಾಡಿದ್ದಾರೆ. ಅದಕ್ಕೆ ಬದಲಾಗಿ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಮುನಿಸಿಪಲ್ ಹೈಸ್ಕೂಲುಗಳನ್ನು ಸರ್ಕಾರದವರೇ ವಹಿಸಿಕೊಂಡು, ಲೋಕಲ್ ಫಂಡ್ ಆಸ್ಪತ್ರೆಗಳನ್ನು ನಡೆಸುತ್ತಿರುವ ಹಾಗೆ ನಡೆಸಿದರೆ, ಒಳ್ಳೆಯದೆಂದು ಹೇಳುತ್ತೇನೆ.

ಬೆಂಗಳೂರಿನಲ್ಲಿರುವ ಕಾರ್ಪೊರೇಷನ್ ಶಾಲೆಗಳಲ್ಲಿ ಕೆಲಸ ಮಾಡುವವರಿಗೆ ಪೆನ್ಷನ್ ಸೌಲಭ್ಯವನ್ನು ಕೊಟ್ಟಿದ್ದಾರೆ. ಅದೇರೀತಿ ಮುನಿಸಿಪಲ್ ಹೈಸ್ಕೂಲು ನೌಕರರಿಗೆ ಪೆನ್ಷನ್ ಸೌಲಭ್ಯವನ್ನು ಕೊಟ್ಟಿಲ್ಲವೆಂದು ಕೇಳುತ್ತೇನೆ. ಸರ್ಕಾರದವರು ಈಗಲಾದರೂ ಮನಸ್ಸುಮಾಡಿ ಪೆನ್ಷನ್ ಸೌಲಭ್ಯವನ್ನು ಕೊಡುವುದು ಉತ್ತಮವೆಂದು ನನಗನ್ನಿಸುತ್ತದೆ.

ಕಾಲೇಜುಗಳಿಗೆ ಬೇಕಾದಷ್ಟು ವಿದ್ಯಾರ್ಥಿಗಳನ್ನು ಇಲ್ಲಿಯವರೆಗೂ ನಾವು ಕಳಿಸುತ್ತಿದ್ದೆವು. ಅದನ್ನು ತಡೆಗಟ್ಟಬೇಕಾದರೆ, ಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಯೋಗ್ಯತೆ ಏನಿದೆ ಎಂದು ಒಂದು ರಿಕಾರ್ಡ್ ಇಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಹೀಗೆ ಒಂದು cumulative record ಮಂಗಳೂರು ಮುಂತಾದ ಕಡೆ maintain ಮಾಡಿದ್ದಾರೆ. cumulative record maintain ಮಾಡುವುದರಿಂದ ವಿದ್ಯಾರ್ಥಿಯ ಮನೋಭಾವವೇನಿದೆ, ಅವನ ಆಕಾಂಕ್ಷೆ ಏನಿದೆ ಎನ್ನುವುದನ್ನು ಅರಿತುಕೊಳ್ಳುವುದಕ್ಕೆ ದಾರಿಯಾಗುತ್ತದೆ. ಇದರಿಂದ ವಿದ್ಯಾರ್ಥಿಗಳನ್ನು ಮುಂದೆ ಔದ್ಯೋಗಿಕ ಶಿಕ್ಷಣದ ಕಡೆಗೆ ತಿರುಗಿಸಿದರೆ ಕಾಲೇಜುಗಳಿಗೆ ಹೋಗಿ ಬಿ.ಎ., ಬಿ.ಎಸ್‌ಸಿ., ಮಾಡಲು ಈಗ ವ್ಯರ್ಥವಾಗುತ್ತಿರುವ ಕೋಟ್ಯಂತರ ರೂಪಾಯಿ ಉಳಿತಾಯವಾಗುತ್ತದೆ. ಆದುದರಿಂದ ಸ್ಕೂಲುಗಳಲ್ಲಿ cumulative record maintain ಮಾಡಲು ಅವಕಾಶವನ್ನು ಕಲ್ಪಿಸಿದರೆ ಒಳ್ಳೆಯದು.

ಟೆಕ್ಸ್ಟ್ ಬುಕ್‌ಗಳ ವಿಚಾರದಲ್ಲಿ ಅನೇಕ ದೂರುಗಳಿವೆ. ಉದಾಹರಣೆಗೆ ಹೋದ ವರ್ಷ S.S.L.C. ಇಂಗ್ಲಿಷ್ ಟೆಕ್ಸ್ಟ್ ಬರಬೇಕಾದರೆ ಬಹಳ ವಿಳಂಬವಾಯಿತು. ಹಾಗೆಯೇ ಮಿಡಲ್ ಸ್ಕೂಲ್ ಟೆಕ್ಸ್ಟ್ ಬುಕ್ಸ್ ಬರಬೇಕಾದರೂ ಬಹಳ ವಿಳಂಬವಾಯಿತು. ಅನೇಕ ವರ್ಷಗಳಿಂದ ಇದೇ ಸಭೆಯ ಮುಂದೆ ಅನೇಕ ಮಾನ್ಯ ಸದಸ್ಯರು ಈ ಬಗ್ಗೆ ಸೂಚನೆ ಮಾಡಿದ್ದಾರೆ. ಆದಾಗ್ಯೂ ಕೂಡ ಮುಂದಾಲೋಚನೆ ಇಲ್ಲದೆ, ಪಠ್ಯ ಪುಸ್ತಕಗಳನ್ನು ಕಾಲಕ್ಕೆ ಸರಿಯಾಗಿ ಒದಗಿಸದೆ ಏಕೆ ತೊಂದರೆ ಕೊಡುತ್ತೀರಿ ಎಂದು ಕೇಳುತ್ತೇನೆ. ಡೆಲ್ಲಿಯಲ್ಲಿರುವವರಿಗೆ ಪಠ್ಯಪುಸ್ತಕವನ್ನು ಸರಬರಾಯಿ ಮಾಡುವ ಕೆಲಸವನ್ನು ವಹಿಸಿದ್ದರೆಂಬ ವರ್ತಮಾನವಿದೆ. ಅದಕ್ಕೆ ಯಾರು ಕಾರಣರೋ ಗೊತ್ತಿಲ್ಲ. ಟೆಕ್ಸ್ಟ್ ಬುಕ್ ಕಮಿಟಿ ಅದನ್ನು ಪರಿಶೀಲಿಸಲಿಲ್ಲವೆ?

5 P.M.

ಶ್ರೀ ಅಣ್ಣಾರಾವ್ ಗಣಮುಖಿ.—ಆ ಕಮಿಟಿಯವರೇ ರೆಕಮೆಂಡ್ ಮಾಡಿದ್ದರು.

ಶ್ರೀ ವೈ. ವೀರಪ್ಪ.—ಸರಿಯಾದ ಕಾಲದಲ್ಲಿ ಒದಗಿಸದಿದ್ದರೆ ಎಷ್ಟು ಹಣ ಪಠ್ಯಪುಸ್ತಕಗಳಿಗಾಗಿ ಖರ್ಚುಮಾಡಿದರೂ ಪ್ರಯೋಜನವೇನು? ಸಣ್ಣಪುಟ್ಟ ಸ್ಕೂಲಿನ ಹುಡುಗರು ಪುಸ್ತಕಗಳಿಗಾಗಿ ಡಿಪೋಗಳಿಗೆ ಅಲೆಯುವುದನ್ನೂ ಸಿಕ್ಕದೆ ನಿರಾಶರಾಗುವುದನ್ನೂ ನೋಡುತ್ತಿದ್ದೇನೆ. ಆದುದರಿಂದ ಸಮಿತಿಯವರು ಸರಿಯಾಗಿ ಮುಂದಾಲೋಚನೆಮಾಡಿ ಸಕಾಲದಲ್ಲಿ ಪುಸ್ತಕಗಳು ದೊರೆಯುವಂತೆ ಮಾಡಬೇಕಾದುದು ಪ್ರಥಮ ಕರ್ತವ್ಯವೆಂದು ಹೇಳುತ್ತೇನೆ.

ವಿದ್ಯಾರ್ಥಿವೇತನದ ಹಂಚಿಕೆಯ ವಿಚಾರದಲ್ಲಿ ಬಹಳ ವಿಳಂಬವಾಗುತ್ತಿದೆ. ಮತ್ತು ಅದಕ್ಕೆ ಸಂಬಂಧಪಟ್ಟ ಸಮಿತಿಯ ಸದಸ್ಯರ ನೇಮಕದಲ್ಲಿ ಸರ್ಕಾರ ಕೂಡ ಕೈ ಹಾಕುತ್ತಿದೆಯೆಂದು ಗೊತ್ತಾಗಿದೆ. ಹಾಸನ ಜಿಲ್ಲೆಯಲ್ಲಿ ಕೆಲವು ಮಂದಿಯ ಹೆಸರನ್ನು ಸ್ಥಳೀಯ ಅಧಿಕಾರಿಗಳು ಕಳುಹಿಸಿದ ಮೇಲೆ ಗವರ್ನಮೆಂಟ್ ಲೆವಲ್‌ನಲ್ಲಿ ಸರ್ಕಾರಕ್ಕೆ ಬಂದ ಮೇಲೆ ಏಕೆ ಬದಲಾಯಿಸಿದರು? ಹೀಗೆ ಮಾಡುವುದು ಅಷ್ಟು ಸತ್ಸಂಪ್ರದಾಯವಲ್ಲ. ವಿದ್ಯಾರ್ಥಿವೇತನವನ್ನು ಸರಿಯಾದ ಕಾಲದಲ್ಲಿ ಹಂಚುವುದಿಲ್ಲ. ಅದು ಕೈಸೇರುವ ವೇಳೆಗೆ ಆಗಲೇ ವಿದ್ಯಾರ್ಥಿಗಳು ತಮ್ಮ ತಂದೆ ತಾಯಿಗಳಿಂದ ಹಣ ತರಿಸಿಕೊಂಡು ಶಾಲೆಗೆ ಪಾವತಿ ಮಾಡಿರುತ್ತಾರೆ. ಅಲ್ಲದೆ ಆ ಹಣದ ಜೊತೆಗೆ ಕೊನೆಯಲ್ಲಿ ಶಾಲೆಯಿಂದ ಕೊಡುವ ವೇತನವೂ

(ಶ್ರೀ ವೈ. ವೀರಪ್ಪ)

ಖರ್ಚಾಗುತ್ತದೆ, ಹೀಗಾಗಿ ಖರ್ಚು ದುಬಾರಿಯಾಗುವುದೂ ಅಲ್ಲದೆ ಸರ್ಕಾರ ನೀಡುವ ಸೌಲಭ್ಯವನ್ನು ಸಕಾಲದಲ್ಲಿ ಉಪಯೋಗಿಸಿಕೊಳ್ಳಲು ಅವಕಾಶವೂ ಸಹ ಆಗುವುದಿಲ್ಲ. ಇನ್ನು ಮುಂದಾದರೂ ಶೀಘ್ರವಾಗಿ ವಿದ್ಯಾರ್ಥಿವೇತನ ವಿದ್ಯಾರ್ಥಿಗಳ ಕೈ ಸೇರುವಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ.

ನಮ್ಮ ಮಿತ್ರರು ಹೇಳಿದ ಹಾಗೆ ಉಪಾಧ್ಯಾಯರುಗಳನ್ನು ಇಲಾಖೆಯವರು ಒಂದು ಸಾರಿ ವರ್ಗ ಮಾಡಿದ ಮೇಲೆ ಮತ್ತೆ ಯಾರದೋ ಒತ್ತಾಯದ ಮೇಲೆ ಅದನ್ನು ವಜಾಮಾಡಿಸಿಕೊಳ್ಳುವುದು ಸರಿಯಾಗಿ ಕಾಣುವುದಿಲ್ಲ. ಇದಕ್ಕೆ ನಿದರ್ಶನಗಳಿವೆ. ನಾನು ಇಲ್ಲಿ ಹೆಸರನ್ನು ಹೇಳಲು ಇಷ್ಟಪಡುವುದಿಲ್ಲ. ನನ್ನ ತಾಲ್ಲೂಕಿನಲ್ಲಿ ಒಬ್ಬ ಉಪಾಧ್ಯಾಯರು ಒಂದು ಸಹಕಾರ ಸಂಘದಲ್ಲಿ ಸೆಕ್ರೆಟರಿಗಳಾಗಿದ್ದು ಅಲ್ಲಿ ಸಾಲ ತೆಗೆದು ಕೊಂಡವರಿಗೆ ಸಕಾಲದಲ್ಲಿ ಅದನ್ನು ಕೊಡಬೇಡಿ ಎಂದು ಹೇಳಿ ಸಾಲಗಾರರ ಆಸ್ತಿಪಾಸ್ತಿಗಳೆಲ್ಲಾ ಜಪ್ತಿಯಾಗಿ ಹರಾಜಾಗಲು ಕಾರಣರಾದರು. ಅದನ್ನು ಜಿಲ್ಲಾ ವಿದ್ಯಾಧಿಕಾರಿಗಳ ಮತ್ತು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದ ಮೇಲೆ ಆ ಉಪಾಧ್ಯಾಯರನ್ನು ವರ್ಗಮಾಡಬೇಕೆಂದು ಡಿ.ಪಿ.ಐ.ಗೆ ಶಿಫಾರಸುಮಾಡಿದರು. ಆ ಉಪಾಧ್ಯಾಯರನ್ನು ವರ್ಗ ಮಾಡಿದಮೇಲೆ ಮತ್ತೆ ಎಲ್ಲಿಂದ ವರ್ಗ ಮಾಡಿದ್ದರೋ ಅದೇ ಜಾಗದಲ್ಲೇ ಇರುವಂತೆ ಮತ್ತೆ ಆರ್ಡರಾಗಿದೆ. ಇದನ್ನು ಒಬ್ಬ ವ್ಯಕ್ತಿಯ ಅಥವಾ ಉಪಾಧ್ಯಾಯರ ಮೇಲೆ ಹೊಟ್ಟೆಕಿಚ್ಚಿನಿಂದ ಹೇಳುತ್ತಿಲ್ಲ. ಆದರೆ ಉಪಾಧ್ಯಾಯರುಗಳೂ ಕೂಡ ರಾಜಕೀಯಕ್ಕೆ ಪ್ರವೇಶಮಾಡಿದರೆ ಎಷ್ಟು ಅಭ್ಯಾಸವಾಗುತ್ತದೆಂಬುದನ್ನು ಸರ್ಕಾರದ ಗಮನಕ್ಕೆ ತರಬೇಕೆಂಬ ಉದ್ದೇಶದಿಂದ ಇದನ್ನು ತಿಳಿಸುತ್ತಿದ್ದೇನೆ. ಬೇಕಾದರೆ ಮಂತ್ರಿಗಳ ಛೇಂಬರಿಗೆ ಹೋಗಿ ಹೆಸರನು ಹೇಳುತ್ತೇನೆ.

ಅನೇಕ ಹಳ್ಳಿಗಳಲ್ಲಿ ಮುಂದಾಲೋಚನೆಯಿಲ್ಲದೆ ಯೋಜನೆಗಳನ್ನು ಮಾಡುತ್ತಿರುವುದರಿಂದ ತೊಂದರೆಯಾಗಿದೆಯೆಂದು ಹೇಳಬೇಕಾಗಿದೆ; ಶಾಲೆಗಳನ್ನು ದೇವಸ್ಥಾನಗಳಲ್ಲಿ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಯಲು ಸರಿಯಾದ ವಾತಾವರಣವಿರಬೇಕು. ಅದನ್ನು ಕಲ್ಪಿಸಿ ಕೊಡದೆ ವರ್ಷಕ್ಕೆ 13 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಯೋಜನೆ ಮಾಡುವಾಗ ನಿರ್ದಿಷ್ಟವಾಗಿ ಪರಿಪಕ್ವವಾಗಿ ಮಾಡಬೇಕು. ಈ ಸಂದರ್ಭದಲ್ಲಿ ನಾನು ಹೇಳುವುದಿಷ್ಟೆ. ಎರಡು ವಿಚಾರಗಳನ್ನು ಮನಸ್ಸಿನಲ್ಲಿಡಬೇಕು. ಈಗಿರುವ ವಿದ್ಯಾಭ್ಯಾಸ ಕ್ರಮದಲ್ಲಿರುವ ಲೋಪ ದೋಷಗಳನ್ನು ತಿದ್ದಿ ಶೀಘ್ರವಾಗಿ ಪರಿಣಾಮವಾಗುವಂಥ ಯೋಜನೆ ಮಾಡಬೇಕು. ಗುಲ್ಬರ್ಗ ಟೌನ್‌ನಲ್ಲಿ ಒಂದು ಹೈಯರ್ ಸೆಕೆಂಡರಿ ಸ್ಕೂಲಿದೆ. ಅಲ್ಲಿಗೆ ವೀವಿಂಗ್ ಸೆಕ್ಷನ್ ಕೊಟ್ಟಿದೆ. ಆದರೆ ಅದಕ್ಕೆ ಅಲ್ಲಿ ಸರಿಯಾದ ಸ್ಥಳವಿಲ್ಲ ಮತ್ತು ಉಪಾಧ್ಯಾಯರಿಲ್ಲ. ಟ್ರೈನ್ಡ್ ಉಪಾಧ್ಯಾಯರಿಲ್ಲದೆ, ಇನ್ಸ್‌ಪೆಕ್ಟರಿಲ್ಲದೆ ಏನೂ ಮಾಡುವುದಕ್ಕಾಗುವುದಿಲ್ಲ ಆದುದರಿಂದ ಏನಾದರೂ ಒಂದು ಯೋಜನೆ ಮಾಡಬೇಕಾದರೆ ನಿರ್ದಿಷ್ಟವಾಗಿ, ಪರಿಪಕ್ವವಾಗಿ ಮಾಡಬೇಕೆಂದು ಹೇಳುತ್ತೇನೆ. ಒಂದೇ ಸಲ 19 ಜಿಲ್ಲೆಗಳಲ್ಲೂ ಮಾಡುವುದಕ್ಕಾಗದಿದ್ದರೆ ಒಂದೊಂದು ಜಿಲ್ಲೆಯಲ್ಲಾದರೂ ಮಾಡಿ; ಅದು ಯಶಸ್ವಿಯಾಗುವಂತೆ ಮಾಡಿ. ಇರುವ ಹಣವನ್ನು ಖರ್ಚು ಮಾಡಿ ಅದಕ್ಕೆ ಸರಿಯಾದ ಪ್ರತಿಫಲ ದೊರೆಯುವಂತೆ ಮಾಡಿ. ಉದಾಹರಣೆಗೆ ಇದೇ ಬೆಂಗಳೂರು ನಗರದಲ್ಲಿ ನ್ಯಾಷನಲ್ ಹೈಸ್ಕೂಲು ಮತ್ತು ಪ್ರೈಮರಿ ಸ್ಕೂಲು ಎರಡೂ ಇವೆ. ಅಲ್ಲಿ ಬೇಸಿಕ್ ಸ್ಕೂಲನ್ನು ತೆರೆದು ಹಾರ್ಟಿಕಲ್ಚರ್ ವಿಷಯ ಬೋಧಿಸುತ್ತಿದ್ದಾರೆ. ಆದರೆ ಹುಡುಗರು ಅಲ್ಲಿ ಗಿಡ ಹಾಕಿ ನೀರು ಹಾಕಲು ಜಮೀನಿಲ್ಲ. ಹುಡುಗರನ್ನು ಲಾಲ್‌ಬಾಗಿಗೆ ಕರೆದುಕೊಂಡು ಹೋಗಿ ಅಲ್ಲಿ ಮಾಡಿರುವ ಉದ್ಯಾನವನ್ನು ತೋರಿಸುತ್ತಿದ್ದಾರೆ. ಹೀಗೆ ಬೇಸಿಕ್ ಸ್ಕೂಲು ತೆರೆದಿದ್ದೇವೆಂದು ಹೇಳಿ ದೇಶದ ಜನರಿಗೆ ಮೋಸಮಾಡಿ ಮರುಳು ಮಾಡುತ್ತಿದ್ದೀರಿ. ಹಾರ್ಟಿಕಲ್ಚರ್ ವಿಷಯ ಬೋಧಿಸುವಾಗ ತೋಟ ಮಾಡಲು ಅವಕಾಶವಿಲ್ಲದಿದ್ದರೆ ವಿದ್ಯಾರ್ಥಿಗಳು ಹೇಗೆತಾನೆ ಮುಂದುವರಿದಾರು? ಹೀಗೆ ಅನೇಕ ಕಡೆ ಇದೆ. ಇದರಿಂದ ಖರ್ಚುಮಾಡುವ ಹಣ ಪರಿಣಾಮಕಾರಿಯಾಗುವುದಿಲ್ಲ.

ಇನ್ಸ್‌ಪೆಕ್ಷನ್ ವಿಜಿಲೆಂಟಾಗಿಯೂ, ಎಫೆಕ್ಟಿವ್ ಆಗಿಯೂ ಇರುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಉದಾಹರಣೆಗೆ ಬಿದರೆ ಜಿಲ್ಲೆಯಲ್ಲಿ ಇನ್ಸ್‌ಪೆಕ್ಷನ್ ಮಾಡಬೇಕಾದರೆ ಬಹಳ ಕಷ್ಟವಿದೆ. ಬಹುಶಃ ವಿದ್ಯಾಸಚಿವರಿಗೆ ಇದು ಗೊತ್ತಿದೆ. ಬಸ್ಸು ಮತ್ತು ವಾಹನ ಸೌಕರ್ಯವಿರುವ ಕಡೆಗೆ ಜೀಪನ್ನು ಕೊಟ್ಟಿದೆ. ಬಿದರೆ ಜಿಲ್ಲೆಗೆ ನಾವು ಹೋಗಿದ್ದಾಗ ನೋಡಿದಂತೆ ಅಲ್ಲಿ ಒಂಟೆಗಳ ಮೇಲೆ ಕೂಡ ಹೋಗುವ ಪ್ರಸಂಗ ಬರುತ್ತದೆ. ರಸ್ತೆಗಳು ಚೆನ್ನಾಗಿಲ್ಲ. ಆದುದರಿಂದ ಇನ್ಸ್‌ಪೆಕ್ಷನ್ ಮಾಡುವುದು ಕಷ್ಟವಾಗಿದೆ.

ಆಮೇಲೆ ಸ್ಕೂಲು ಕಟ್ಟಡಗಳ ಬಗ್ಗೆ ಹೆಚ್ಚು ನಿಗಾ ಕೊಡದಿದ್ದರೆ ಒಳ್ಳೆಯ ವಾತಾವರಣವುಂಟಾಗುವುದಿಲ್ಲ. ಟೈಪ್ ಡಿಸೈನ್ ಪ್ರಕಾರ ಕಟ್ಟಡ ಆಗಬೇಕು, ಅದಕ್ಕೆ ಸಿಮೆಂಟೇಬೇಕು ಎಂದು ಹೇಳಿದರೆ ಅದರಿಂದ ಬೇಗ ಕಟ್ಟಡಗಳನ್ನೊದಗಿಸುವುದಕ್ಕಾಗುವುದಿಲ್ಲ. ಹಳ್ಳಿಗಳಲ್ಲಿ ಮಣ್ಣಿನಗೋಡೆ ಹಾಕಿ ಹೆಂಚು ಹೊದಿಸಿರುವ ಅನೇಕ ಮನೆಗಳಿವೆ. ಆ ರೀತಿ ಸುಲಭ ಬೆಲೆಯಲ್ಲಿ ಕಟ್ಟಡ ಕಟ್ಟುವಂತೆ ಒಂದು ಕ್ರಮವನ್ನು ಅನುಸರಿಸಬೇಕು. ಮುಂದೆ ಪಂಚವಾರ್ಷಿಕ ಯೋಜನೆಯಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ತರಲು ಫೇಸ್ಡ್ ಪ್ರೋಗ್ರಾಂ ಏನು ಇದೆ, ಎಷ್ಟು ವರ್ಷಗಳಲ್ಲಿ ಸಾಕಷ್ಟು ಉಪಾಧ್ಯಾಯರನ್ನು, ಸ್ಕೂಲು ಕಟ್ಟಡಗಳನ್ನು ಒದಗಿಸಬಹುದು ಎಂಬುದನ್ನು ನೋಡಿ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬೇಕು. ರಾಜ್ಯಾಂಗದ 45ನೆಯ ಆರ್ಟಿಕಲ್‌ನಲ್ಲಿ ನಿರ್ದೇಶವಿದೆಯೆಂದು ಹೇಳಿದರೆ ಸಾಲದು. ಆದುದರಿಂದ ಮುಂದಾಲೋಚನೆಯಿಂದ ಸರಿಯಾದ ವ್ಯವಸ್ಥೆ ಮಾಡುವುದು ಒಳ್ಳೆಯದೆಂದು ಹೇಳಿ ಇಷ್ಟು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸುತ್ತೇನೆ.

ಶ್ರೀ ಟಿ. ಎನ್. ಮುದಲಗಿರಿಗೌಡ.—ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸದ ಡಿಮ್ಯಾಂಡನ್ನು ನಾನು ಅನುಮೋದಿಸುತ್ತಾ ಇದಕ್ಕೆ ಸಂಬಂಧಪಟ್ಟ ಹಾಗೆ ಒಂದೆರಡು ಸಲಹೆಗಳನ್ನು ಮಾಡಬೇಕೆಂದಿದ್ದೇನೆ. ಈಗಾಗಲೇ ಪ್ರಸಿದ್ಧಪಡಿಸಿರುವ ಹಾಗೆ ಸರಕಾರದವರು ಪ್ರೈಮರಿ ಎಜುಕೇಷನ್ನನ್ನು ಮುಂದೆ ರಚನೆಯಾಗತಕ್ಕ ತಾಲ್ಲೂಕು ಬೋರ್ಡುಗಳಿಗೆ ವಹಿಸತಕ್ಕ ಯೋಜನೆಯೊಂದನ್ನು ಮಾಡಿದ್ದಾರೆ ಎಂಬುದಾಗಿ ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಇದನ್ನು ಓದಿದಾಗ ನನಗೆ ಬಹಳ ಆಶ್ಚರ್ಯವಾಯಿತು. ಮೈಸೂರಿನ ಪ್ರಜೆಯಾಗಿ

ನಾನು ನೋಡಿದಂತೆ, ಹಿಂದೆ ನಮ್ಮ ಸಂಸ್ಥಾನದಲ್ಲಿ ಪ್ರೈಮರಿ ಎಜುಕೇಷನ್ ಬೋರ್ಡ್ ಎಂದಿದ್ದಿತು....

Mr. SPEAKER.—I have got the record of what transpired between the Chair and the Honourable Member Sri N. Rachiah. I was under such a strain and stress; I had so much strain when the Minister wass peaking that I did not fully comprehend what he said. But I have got from the record what all he said. During the course of his point of order he said that he was also voicing the views of the Government—not merely his views. This is what is on record :

> "**Sri N. RACHIAH** (Minister for Agriculture).—I raise a point of order. With regard to the proceedings of this House, we expect that equal treatment should be given to all members. Because when I was speaking on a previous occasion, one member incessantly interrupted and you did not take any action against him........."

This is not a fact. I did take some action against him.

> " and now you are frankly asking the Honourable Member Sri Hanumiah to get out........"

I did not ask Sri Hanumiah categorically to get out. What I said was that if he (Sri Hanumiah) persisted in not resuming his seat, he might have to go out. Then......

> "**Mr. SPEAKER.**—It is unfair for the Minister to say this.
>
> **Sri N. RACHIAH.**—I am also voicing the views of the Government.
>
ಇನ್ನು 1,322 ಸಾಲೆಗಳು ಆಗ ಬೇಕಾಗಿವೆ. ಈ ವರ್ಷ 1,100 ಸಾಲೆಗಳನ್ನು ತೆಗೆಯುವುದಕ್ಕಾಗಿ ಬಜೆಟ್ಟಿನಲ್ಲಿ ಹಣ ಒದಗಿಸಿದ್ದಾರೆ. ಆದರೂ ಸಹ 222 ಸಾಲೆಗಳು ಇನ್ನೂ ಬೇಕಾಗುತ್ತವೆ. ಈ ಸಾಲೆಗಳನ್ನು ಸಹ ಪ್ರಾರಂಭಿಸುವುದಕ್ಕೆ ಹಣ ಒದಗಿಸಲು ರಿಅಪ್ರೋಪ್ರಿಯೇಷನ್ ಮಾಡಲು ವಿಚಾರಿಸುತ್ತೇವೆ. ಕೇಂದ್ರ ಸರಕಾರವೂ ಸಹ ಕೆಲಮಟ್ಟಿಗೆ ಸಹಾಯ ಮಾಡುತ್ತದೆ. ಇನ್ನು ಹೆಚ್ಚಿಗೆ ಪ್ರಾರಂಭಿಸಬೇಕಾಗಿರುವ 222 ಸಾಲೆಗಳನ್ನು ಜನಸಂಖ್ಯೆ 300ರ ಮೇಲೆ ಇರತಕ್ಕ ಹಳ್ಳಿಗಳಲ್ಲಿ ಪ್ರಾರಂಭಿಸ ಬೇಕೆಂದಿದ್ದೇವೆ. ಈ ರೀತಿ ಮಾಡಲು 1961-62ರಲ್ಲಿ ಒತ್ತಾಯದ ಶಿಕ್ಷಣ ಪ್ರಾರಂಭಿಸಲು ಅನುಕೂಲವಾಗುತ್ತದೆ. ಎಲ್ಲಾ ಕಡೆಗೂ ಸಾಲೆಗಳನ್ನು ಸ್ಥಾಪನೆ ಮಾಡಬೇಕೆಂದು ನಮ್ಮ ಪ್ರೋಗ್ರಾಂ ಇದೆ. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಎಷ್ಟು ಸಾಲೆಗಳಿವೆ ಎಂಬುದನ್ನು ಲೆಕ್ಕ ಮಾಡಿ ನೋಡಿದರೆ 1960ರಲ್ಲಿ 23,598 ಪ್ರೈಮರಿ ಸ್ಕೂಲುಗಳಿವೆ. ಇವುಗಳಲ್ಲಿ 1813 ಬೇಸಿಕ್ ಸ್ಕೂಲುಗಳಿವೆ. ಒಬ್ಬ ಟೀಚರ್ ಇರತಕ್ಕ 10,991 ಸಾಲೆಗಳಿವೆ. ಹೆಚ್ಚು ಶಿಕ್ಷಕರಿರುವ ಸಾಲೆಗಳು 12,607 ಇವೆ. ಒಬ್ಬ ಶಿಕ್ಷಕ ಇರುವ ಸಾಲೆಗಳಲ್ಲಿ ಎಫಿಷಿಯನ್ಸಿ ಇರುವುದಿಲ್ಲ ಎಂಬುದು ನಿಜ ಎಂದು ನನಗೆ ಅನಿಸುತ್ತದೆ. ಏಕೆಂದರೆ ಅಂಥ ಶಿಕ್ಷಕನು ಕ್ಯಾಜುಅಲ್ ಲೀವ್ ಮೇಲೆ ಯಾಗಲಿ ಅಥವಾ 15 ದಿವಸ ರಜೆಯ ಮೇಲೆ ಯಾಗಲಿ ಹೋದರೆ ಅಂಥ ಸಾಲೆಗೆ ಮತ್ತೊಬ್ಬ ಶಿಕ್ಷಕನನ್ನು ಕಳಿಸುವುದಕ್ಕಾಗುವುದಿಲ್ಲ, ಮತ್ತೊಬ್ಬ ಶಿಕ್ಷಕನನ್ನು ನೇಮಕ ಮಾಡುವುದಕ್ಕೆ ಸಾಮಾನ್ಯವಾಗಿ ಒಂದು ತಿಂಗಳ ಅವಧಿ ಹೊರಟು ಹೋಗುತ್ತದೆ. ಒತ್ತಾಯದ ಶಿಕ್ಷಣ ಜಾರಿಗೆ ಬಂದ ಮೇಲೆ ಹೆಚ್ಚು ಜನ ಶಿಕ್ಷಕರನ್ನು ನೇಮಿಸಲಾಗುವುದು. ಅಂದರೆ ಇಂಥ ತೊಂದರೆ ತಪ್ಪುವುದು ಮತ್ತು ಶಿಕ್ಷಣ ಮಟ್ಟ ಮೇಲಕ್ಕೆ ಏರುವುದು ಎಂದು ನನಗೆ ಅನಿಸುತ್ತದೆ. ಈಗಿನ ಲೆಕ್ಕದ ಪ್ರಕಾರ 6 ರಿಂದ 11 ವರ್ಷಗಳ ವರೆಗೆ ವಿದ್ಯಾರ್ಥಿಗಳ ಪ್ರಮಾಣ ಶೇಕಡಾ 64.6 ರಷ್ಟು ಇದೆ ಇದು ಹಳೆಯ ಮೈಸೂರಿನಲ್ಲಿ 60.8 ರಷ್ಟಿದೆ. ಮುಂಬಯಿ ಕರ್ನಾಟಕದಲ್ಲಿ ಶೇಕಡಾ 91.9 ರಷ್ಟಿದೆ. ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ ಇದು ಶೇಕಡಾ 31.9 ರಷ್ಟಿದೆ. ಮದ್ರಾಸ್ ಕರ್ನಾಟಕ ಪ್ರದೇಶದಲ್ಲಿ ಶೇಕಡಾ 91.7 ರಷ್ಟಿದೆ. ಕೊಡಗಿನಲ್ಲಿ ಶೇಕಡಾ 101.2 ರಷ್ಟಿದೆ. ಎಲ್ಲಕ್ಕೂ ಕಡಮೆ ಅಂದರೆ ಶೇಕಡಾ 31 ರಷ್ಟು ಹೈದರಾಬಾದು ಕರ್ನಾಟಕ ಪ್ರದೇಶದಲ್ಲಿದೆ. ಇನ್ನು wastage ವಿಚಾರ ಮಾಡುವುದಾದರೆ IV year ನಲ್ಲಿ ಸಾಧಾರಣವಾಗಿ ಅದು 82 ರಷ್ಟು ಇರುತ್ತದೆ ಅಂದರೆ ನೂರರಲ್ಲಿ 18 ಹುಡುಗರು ಮಾತ್ರ V ಕ್ಲಾಸಿಗೆ ಹೋಗುತ್ತಾರೆ. ಪ್ರಥಮದಿಂದ ಎಂಟನೆಯ ಕ್ಲಾಸಿನ ವರೆಗೆ ನೋಡಿದರೆ ನಿಜವಾಗಿ wastage ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಮೊದಲನೆಯ ಎರಡನೆಯ ಮೂರನೆಯ ಕ್ಲಾಸ್ ಈ ಪ್ರಕಾರ ಲೆಕ್ಕಹಾಕಿದರೆ ನಿಜವಾದ wastage ಎಷ್ಟು ಎಂಬುದು ಸರಿಯಾಗಿ ಲೆಕ್ಕ ಮಾಡುವುದಕ್ಕಾಗುವುದಿಲ್ಲ, ಸಾಧಾರಣವಾಗಿ ಏಳನೆಯ ವರ್ಷದ ಕೊನೆಗೆ 9 ಪರ್ಸೆಂಟು ಇದೆ ಎಂದು ಕಂಡುಬರುತ್ತದೆ. ಅಂದರೆ ಹೈಸ್ಕೂಲಿಗೆ ಹೋಗುವಾಗ ಶೇಕಡಾ 91 ರಷ್ಟು ಹುಡುಗರು ಸಾಲೆ ಬಿಟ್ಟುಬಿಡುತ್ತಾರೆ. ಅಂದರೆ 100ಕ್ಕೆ 9 ರಷ್ಟು ಹುಡುಗರು ಹೈಸ್ಕೂಲಿಗೆ ಹೋಗುತ್ತಾರೆ ಎಂದು ಲೆಕ್ಕ ಕಂಡು ಬರುತ್ತದೆ. 1ನೇ ಏಪ್ರಿಲ್ 1957ರಲ್ಲಿ ಮಿಡಲ್ ಸ್ಕೂಲುಗಳು 1524 ಇದ್ದುವು. ಈಗ ಒಟ್ಟು 633 ಮಿಡಲ್ ಸ್ಕೂಲುಗಳನ್ನು ಪ್ರಾರಂಭಿಸಲಾಗಿದೆ. ಇಲ್ಲಿಯ ವರೆಗೆ ಎಷ್ಟು ಸಾಲೆಗ ಪ್ರಾರಂಭಿಸಲಾಗಿದೆ ಎಂದರೆ—

1957-58 ರಲ್ಲಿ	...	256
1958-59 ರಲ್ಲಿ	...	331
1969-60 ರಲ್ಲಿ	...	46
	ಒಟ್ಟು	633

ಪ್ರಾರಂಭ ಮಾಡಿದ್ದೇವೆ. ಒಟ್ಟು 2,157 ಸಾಲೆಗಳು ಆಗ ಬೇಕಾಗಿವೆ. ಅಂದರೆ ಇನ್ನೂ 570 ಸಾಲೆಗಳನ್ನು ಪ್ರಾರಂಭಿಸ ಬೇಕಾಗಿದೆ. ಗುಲಬುರ್ಗಾ ಡಿವಿಜನ್ನಿನಲ್ಲಿ 378 ಸಾಲೆಗಳು ಬೇಕಾಗಿರುತ್ತವೆ. ಗುಲಬುರ್ಗಾದಲ್ಲಿ ಬಹಳ ಕಡಮೆ ಸಾಲೆಗಳಿವೆ. ಬಜೆಟ್ಟಿನಲ್ಲಿ ಸಾಕಷ್ಟು ಹಣ ಇರುವುದಿಲ್ಲ, ಹಾಗಾದರೆ ಇದಕ್ಕೆ ಹಣವನ್ನು ಎಲ್ಲಿಂದ ತರಬೇಕು ? ಕಳೆದ ನಾಲ್ಕು ವರ್ಷಗಳಲ್ಲಿ 4,788 ಶಿಕ್ಷಕರನ್ನು ನೇಮಕ ಮಾಡಲಾಗಿದೆ. ಇನ್ನೂ ಹೆಚ್ಚಿಗೆ ಶಿಕ್ಷಕರು ಬೇಕಾಗಿರುತ್ತಾರೆ. ಈಗ ಇರತಕ್ಕ ಶಿಕ್ಷಕರ ಸಂಖ್ಯೆ ಕಡಮೆಯಾಗಿದೆ. ಆದುದರಿಂದಲೇ ಇದುವರೆಗೆ 4,788 ಶಿಕ್ಷಕರನ್ನು ನೇಮಕ ಮಾಡಿದ್ದೇವೆ. ನಮ್ಮ ದೇಶದಲ್ಲಿರುವ ಉಪಾಧ್ಯಾಯರ ಸಂಖ್ಯೆ 65,5[illegible]0. ಟ್ರೈನ್ಡ್ ಉಪಾಧ್ಯಾಯರ ಪರ್ಸೆಂಟೇಜ್ 59.6. ಇನ್ನು ಸೇಕಡ 40 ಟ್ರೈನಿಂಗ್ ಆಗಿಲ್ಲದಿರುವವರಿದ್ದಾರೆಂದು ಹೇಳಬಹುದು. ಟ್ರೈನಿಂಗ್ ಆಗದಿರುವ ಉಪಾಧ್ಯಾಯರು 2[illegible],487 ಜನರಿದ್ದಾರೆ. ಈಗ ಟ್ರೈನಿಂಗ್ ಕೊಡಲು 57 ಕಾಲೇಜುಗಳಿವೆ, ಅದರಲ್ಲಿ 29 ಬೇಸಿಕ್ ಟೈಪ್ 28 ನಾನ್ ಬೇಸಿಕ್ ಟೈಪ್. Intake capacity ವರ್ಷಕ್ಕೆ 4,870. ಇದರ ಮೇಲೆ ಲೆಕ್ಕಹಾಕಿದರೆ ಸಾಕಷ್ಟು ತರಬೇತು ಪಡೆದವರು ದೊರೆಯಲು ಇನ್ನೂ ಬಹಳ ದಿವಸ ಬೇಕಾಗುತ್ತದೆ. ಈಗ ಎರಡನೆಯ ಯೋಜನೆಯ ಅವಧಿಯಲ್ಲಿ ಹಾಸನ, ಬಳ್ಳಾರಿ, ಧಾರವಾಡ, ಮೈಸೂರು ಮತ್ತು ಬೆಂಗಳೂರು—ಈ ಐದು ಸ್ಥಳಗಳಲ್ಲಿ ಟ್ರೈನಿಂಗಿಗೆ ಅವಕಾಶ ಕಲ್ಪಿಸಲಾಗಿದೆ. 1960-61ರಲ್ಲಿ full fledged Government training ಕಾಲೇಜುಗಳು ಎಂಟು ಇರುತ್ತವೆ. ಹೈಸ್ಕೂಲಿಗಿಂತ ಪ್ರೈಮರಿ ಶಾಲೆಗಳದೇ ಒಂದು ಸಮಸ್ಯೆಯಾಗಿದೆ. 800 ಜನರ ಟ್ರೈನಿಂಗಿಗೆ ಅನುಕೂಲವಾಗುವಂತೆ ಎಂಟು ಶಾಲೆಗಳನ್ನು ತೆರೆದರೆ ಸೇಕಡ ನೂರರಷ್ಟು ಖರ್ಚು ಕೇಂದ್ರ ಸರ್ಕಾರ ಕೊಡುತ್ತದೆ. ಬೇಸಿಕ್ ಟೈಪ್ ಅಂದರೆ ರೆಸಿಡೆನ್ಷಿಯಲ್ ಆಗಿರಬೇಕಾಗುತ್ತದೆ. ಒಂದೇ ಹಾಸ್ಟಲಿನಲ್ಲಿ ಎಲ್ಲರೂ ಇರಬೇಕಾಗುತ್ತದೆ. ಒಂದೇ ಕಡೆ ಊಟ ಮಾಡಬೇಕಾಗುತ್ತದೆ. ಆದುದರಿಂದ ಸೌಲಭ್ಯವಿರುವ ಕಡೆ ಅವಕಾಶ ಮಾಡುತ್ತಿದ್ದೇವೆ. ಹೈಸ್ಕೂಲಿಗೆ ಅಟ್ಯಾಚ್ ಆಗಿ 50 ಜನರ ಟ್ರೈನಿಂಗಿಗೆ ಸಾಲಭ್ಯ ಇರುವಂತೆ ನಾಲ್ಕು ಕಡೆ ಅವಕಾಶ ಮಾಡಬೇಕಾಗಿದೆ. ಕೆಲವರಿಗೆ ನಾನ್ ಬೇಸಿಕ್ ಟ್ರೈನಿಂಗ್ ಆಗಿದೆ. ಅವರಿಗೆ ಬೇಸಿಕ್ ಟ್ರೈನಿಂಗ್ ಕೊಡಬೇಕೆಂದು ರೀಟ್ರೈನಿಂಗಿಗೆ ದೊಡ್ಡಬಳ್ಳಾಪುರದಲ್ಲಿ 150 ಜನರಿಗೆ ಮೂರು ತಿಂಗಳ ಕೋರ್ಸನ್ನಿಡಲು ಕಾರ್ಯ ಕ್ರಮವನ್ನು ತೆಗೆದುಕೊಂಡಿದ್ದೇವೆ. ಈಗ ಬೇಸಿಕ್ ಎಜುಕೇಷನ್ ಎಂಬ ಹೆಸರಿದೆಯೇ ಹೊರತು ನಿಜವಾದ ಬೇಸಿಕ್ ಎಜುಕೇಷನ್ ಇಲ್ಲ ಎಂಬ ಆಪಾದನೆಯಿದೆ. ಸಿಟಿಗಳಲ್ಲಿ ಬೇಸಿಕ್ ಎಜುಕೇಷನಿಗೆ ಅಷ್ಟು ಅವಕಾಶಮಾಡಿಲ್ಲ. ಹಾರ್ಟಿಕಲ್ಚರ್, ಸ್ಪಿನ್ನಿಂಗ್, ವೀವಿಂಗ್ ಮುಂತಾದ ಕ್ರಾಫ್ಟ್‌ಗಳಿಗೆಲ್ಲಾ ಹಳ್ಳಿಗಳಲ್ಲಿ ವಿಶೇಷ ಮಹತ್ವವಿದೆ.

(ಶ್ರೀ ಅಣ್ಣಾರಾವ್ ಗಣಮುಖಿ)

ದೆಹಲಿಯಿಂದ ಬಂದಿದ್ದ ಟೀಮಿನವರು ಮುಂಬಯಿ ಭಾಗಗಳನ್ನು ಬಹಳ ಪ್ರಶಂಸೆ ಮಾಡಿದ್ದಾರೆ. ಹೈದರಾಬಾದು ಕರ್ಣಾಟಕ ಮತ್ತು ಹಳೆಯ ಮೈಸೂರಿನಲ್ಲಿ ಸಾಕಷ್ಟು ಸರಿಯಾದ ಉಪಾಧ್ಯಾಯರಿಲ್ಲ, ಎಕ್ವಿಪ್‌ಮೆಂಟಿಲ್ಲ. ಬೇಸಿಕ್ ಎಜುಕೇಷನ್‌ನಲ್ಲಿ 3 ಸಿಸ್ಟಂಗಳಿವೆ ; Co-related course, co-relation, natural environment. The student must be educated in natural environment, and other craft. ಸೋಷಿಯಲ್ ಎನ್ವೈರನ್‌ಮೆಂಟಿಗೆ, ಗ್ರಾಮ ಪಂಚಾಯಿತಿ, ಮುನಿಸಿಪಾಲಿಟಿ ಮುಂತಾದುವುಗಳ ವಿಚಾರ ತಿಳಿದುಕೊಳ್ಳುವುದಕ್ಕೆ ಸರಿಯಾದ ಅವಕಾಶವಿಲ್ಲ. ಸುಮ್ಮನೆ ಪುಸ್ತಕಗಳನ್ನು ಮಾತ್ರ ಓದಿದರೆ ಸಾಲದು. ಸೋಷಿಯಲ್ ಎನ್ವೈರನ್‌ಮೆಂಟಿನಲ್ಲಿ ಬೆಳೆಯಲು ಅವಕಾಶವಾಗುವಂತೆ ಉಪಾಧ್ಯಾಯರು ಹುಡುಗರನ್ನು ಹೊರಕ್ಕೆ ಕರೆದುಕೊಂಡು ಹೋಗಬೇಕು, ಸಮಾಜದ ಸ್ಟ್ರಕ್ಚರ್, ಸೋಷಿಯಲ್ ಸ್ಟ್ರಕ್ಚರ್, ಸಾಯಿಲ್, ಟ್ರೆಡಿಷನ್, ಕೆಮಿಸ್ಟ್ರಿ ಹೇಗಿದೆ ಎಂದು ಮಾಹಿತಿ ಪಡೆಯಲು ಮಕ್ಕಳಿಗೆ ಅವಕಾಶ ಕಲ್ಪಿಸಿ ಕೊಡಬೇಕು.

6-30 P.M.

ನ್ಯಾಚುರಲ್ ಎನ್ವೈರನ್‌ಮೆಂಟ್ ಅಂದರೆ ಎಲ್ಲಿ ಯಾವ ಗುಡ್ಡವಿದೆ. ನೀರಿನ ಸೌಕರ್ಯ ಹೇಗಿದೆ, ಮಳೆಯೆಷ್ಟಾಗುತ್ತದೆ, ಎಂಥ ಭೂಮಿಯಲ್ಲಿ ಯಾವ ಬೆಳೆ ಬೆಳೆಯಬೇಕು ಎಂಬ ಮಾಹಿತಿ ದೊರೆಯುವಂತೆ ಮಾಡುವುದೇ ನಿಜವಾದ ಬೇಸಿಕ್ ಶಿಕ್ಷಣದ ಉದ್ದೇಶ. ಬರಿಯ ವೀವಿಂಗ್ ಮತ್ತು ಪ್ಲಾನಿಂಗ್ ಕ್ರಾಫ್ಟ್ ಇದ್ದರೆ ಸಾಲದು. ಅದೂ ಬಂದಿರಬೇಕು. ಅಲ್ಲದೆ ಎಲ್ಲವೂ ಸೋಷಿಯಲ್ ಎನ್ವೈರನ್‌ಮೆಂಟ್ ಮೂಲಕವಾಗಿ ಆಗಬೇಕು. ಕೆಲವು ಕಡೆ ಎಂಥ ಪಕ್ಷಿಗಳಿವೆ, ಜಾನುವಾರುಗಳು ಯಾವ ಯಾವುವು ಇವೆ ಎಂಬುದು ಸಹ ಗೊತ್ತಾಗುವುದಿಲ್ಲ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಸಾರ್ವತ್ರಿಕವಾಗಿ ದೇಶದಾದ್ಯಂತ ಬೇಸಿಕ್ ಎಜುಕೇಷನ್ ಜಾರಿಗೆ ತರುತ್ತೇವೆಂದು ಇಂಥ ಸನ್ನಿವೇಶದಲ್ಲಿ ಹೊರಟಿದ್ದೀರಲ್ಲಾ, ಏನು ಹೇಳೋಣ.

ಶ್ರೀ ಅಣ್ಣಾರಾವ್ ಗಣಮುಖಿ.—ಗುರಿಯಿದೆ ; ಪ್ರಯತ್ನ ಮಾಡೋಣ, ಸರ್ಕಾರ ತಪ್ಪು ಮಾಡುತ್ತಿರಬಹುದು ; ಒಪ್ಪುತ್ತೇನೆ. ತಿಳಿಯದೇ ತಪ್ಪು ಮಾಡಿದರೆ ಸಾರ್ವಜನಿಕರು ಹೇಳಬೇಕು. ನಮ್ಮ ಬೆನ್ನು ನಮಗೆ ಕಾಣುವುದಿಲ್ಲ. ತಪ್ಪಿದ್ದರೆ ತಿದ್ದಿಕೊಳ್ಳಲು ತಯಾರಾಗಿದ್ದೇವೆ.

Sri ALUR HANUMANTHAPPA (Nelamangala).—Do you consider starting at least one such basic Institution at Taluk level ?

ಶ್ರೀ ಅಣ್ಣಾರಾವ್ ಗಣಮುಖಿ.—ಅದಕ್ಕೆ ಮುಖ್ಯವಾಗಿ ಮೂರು ವಸ್ತುಗಳು ಬೇಕು, Good teachers, Good syllabus, and text books. ಬೇಸಿಕ್ ಎಜುಕೇಷನ್‌ಗೂ ಸೆಕೆಂಡರಿ ಎಜುಕೇಷನ್‌ಗೂ ಒಂದು ದೊಡ್ಡ ಸಂಬಂಧವಿದೆ. ಅಲ್ಲೂ ಕೂಡ ಕ್ರಾಫ್ಟ್ ಒಂದು ಕಂಪಲ್ಸರಿ ಸಬ್ಜೆಕ್ಟ್ ಮಾಡಿದೆ. ಎಷ್ಟು ಕ್ರಾಫ್ಟ್ ಉಪಾಧ್ಯಾಯರು ಸಿಕ್ಕುತ್ತಾರೆಂಬುದು ಎಲ್ಲರಿಗೂ ಗೊತ್ತಿದೆ. ಆದರೂ ಇನ್ಸ್ಟಿಟ್ಯೂಷನ್ಸ್ ತೆರೆಯಬೇಕಾಗುತ್ತದೆ. ಡ್ರಾಯಿಂಗ್ ಟೀಚರ್ಸ್ ಬೇಕು. ಫಿಸಿಕಲ್ ಎಜುಕೇಷನ್ ಬೋಧನೆ ಮಾಡಲು ಕರೆದರೆ ಒಬ್ಬರೂ ಬರಲಿಲ್ಲ. ಕೊನೆಗೆ ಎಸ್.ಎಸ್.ಎಲ್.ಸಿ. ಆದವರನ್ನೇ ನೇಮಕಮಾಡಿ ಎಂದು ಹೇಳಬೇಕಾಯಿತು. ಪ್ರೈಮರಿ ವಿದ್ಯಾಭ್ಯಾಸದ ಸಮಯದಲ್ಲಿ ಸರಿಯಾದ ಶಿಕ್ಷಣ ದೊರೆಯದಿದ್ದರೆ ಮುಂದೆ ತೊಂದರೆಯಾಗುತ್ತದೆ. "If the button of a man's coat is wrongly buttoned, then the whole thing becomes crooked." ಎಂದು ಇಂಗ್ಲೀಷಿನಲ್ಲಿ ಹೇಳುವುದುಂಟು. ಮೊದಲನೇ ಗುಂಡಿ ಸರಿಯಾಗಿ ಹಾಕದಿದ್ದರೆ ಎಲ್ಲಾ ಹಿಂದು ಮುಂದಾಗುತ್ತದೆ. ಮೊದಲು ಪ್ರೈಮರಿ ಸ್ಟೇಜಿನಲ್ಲಿ ತಳಹದಿ ಚೆನ್ನಾಗಿ ಹಾಕಲು ಆದಷ್ಟು ಪ್ರಯತ್ನ ಮಾಡುತ್ತೇವೆ. ಕ್ರಾಫ್ಟ್ ಉಪಾಧ್ಯಾಯರು ಸಿಕ್ಕದಿದ್ದರೆ ಬೇಸಿಕ್ ಸ್ಕೂಲಿಲ್ಲದಿರುವಾಗ ಬೇಸಿಕ್ ಓರಿಯಂಟೆಡ್ ಸ್ಕೂಲಿರಬೇಕೆಂದು ಹೇಳುತ್ತಿದ್ದಾರೆ. ಅದಕ್ಕೆ ಬೇಸಿಕ್ ಓರಿಯಂಟೆಡ್ ಸಿಲಬಸ್ ತಯಾರಿಸುವುದಕ್ಕೆ ಕೂಡ ಸಂಬಂಧಪಟ್ಟ ಸಮಿತಿಯವರು ಪ್ರಯತ್ನ ಮಾಡಿದ್ದಾರೆ. ಬೇಸಿಕ್ ಶಾಲೆಗಳಲ್ಲಿ, ಹುಡುಗರು ಮುಂದೆ ತಮ್ಮ ಕಾಲ ಮೇಲೆ ತಾವು ನಿಲ್ಲುವಂತಾಗಲು ಹೇಗೆ ಕಲಿಸಬೇಕು, social environment, natural environment ಇವು ಹೇಗಿರಬೇಕು ಇದಕ್ಕೆಲ್ಲ ಸಿಲಬಸ್ ಇವೆ. ಅದರ ಪ್ರಕಾರ ಕೆಲಸ ಮಾಡುತ್ತಾರೆ. ಸಿಲಬಸ್ ಚೆನ್ನಾಗಿದೆ. ಟ್ರೈನ್ಡ್ ಟೀಚರ್ಸ್ ಸಿಕ್ಕಿದರೆ, pupils ಚೆನ್ನಾಗಿದ್ದರೆ, ಪ್ರಾಥಮಿಕ ವಿದ್ಯಾಭ್ಯಾಸವು ಬಹಳ ಉತ್ತಮವಾಗಿ ನಡೆಯುತ್ತದೆಂದು ನನಗೆ ಅನ್ನಿಸುತ್ತದೆ.

ತಾಲ್ಲೂಕ್ ಬೋರ್ಡ್‌ಗಳಿಗೆ ಇದನ್ನು ಕೊಡಬಾರದೆಂದು ಸರ್ಕಾರದವರು ತೀರ್ಮಾನ ತೆಗೆದುಕೊಂಡಿದ್ದಾರೆ. ಕೇಂದ್ರದಿಂದ ಏನು ಸಹಾಯ ಬರುತ್ತದೆಯೋ ಅದನ್ನು ತೆಗೆದುಕೊಂಡು, ಸರ್ಕಾರದವರೇ ನಿಂತುಕೊಂಡು, ನಡೆಸಬೇಕಾಗುತ್ತದೆ. ಆದರೆ ಚುನಾಯಿತರಾದ ಜನರ ಕೈಯಲ್ಲಿ ಶಿಕ್ಷಣದ ಅಧಿಕಾರವನ್ನು ಕೊಟ್ಟು, ಅದರ ಮೂಲಕ ಕೆಲಸಕಾರ್ಯ ಮಾಡಿಸುವಂತೆ ಅಧಿಕಾರ ವಿಕೇಂದ್ರೀಕರಣವನ್ನೇಕೆ ಮಾಡಬಾರದೆನ್ನುವ ಒಂದು ಪ್ರಶ್ನೆ ಇದೆ. ಇಲ್ಲಿ ಒಂದು ಮಾತನ್ನು ಮಾತ್ರ ಹೇಳಬಹುದು. ಸರ್ಕಾರ ಪೂರ್ಣ ಖರ್ಚನ್ನು ವಹಿಸಿಕೊಳ್ಳುವುದಕ್ಕೆ ತಯಾರಿದೆ. Buildings, mid-day meals, attendance scholarships, ಮತ್ತು ಒತ್ತಾಯ ಪೂರ್ವಕವಾದ ಶಿಕ್ಷಣ, ಜನರ ಸಹಾಯ, ಇಂಥ ಕೆಲಸಗಳೆಲ್ಲ ತಾಲ್ಲೂಕು ಬೋರ್ಡುಗಳಿಗೆ ಹೋದರೆ ಎಲ್ಲ ರೀತಿಯ ಸಹಾಯವೂ ಬರಬಹುದು ಎನ್ನುವುದು ನಮ್ಮ ವಿಚಾರ. ಉಪಾಧ್ಯಾಯರುಗಳ ನೇಮಕ, ವರ್ಗಾವಣೆ, ಇಂಥ ಅಧಿಕಾರಗಳನ್ನು ತಾಲ್ಲೂಕು ಬೋರ್ಡ್‌ಗಳಿಗೆ ಕೊಡಬೇಕೆಂಬ ಇಚ್ಛೆ ಇಲ್ಲ. ಶಾಲೆಗಳನ್ನು ನಾವೇ ತೆರೆಯುತ್ತೇವೆ, ಗ್ರ್ಯಾಂಟ್ಸ್ ಕೊಡುತ್ತೇವೆ, ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರು ಇರುತ್ತಾರೆ, ಇನ್ಸ್‌ಪೆಕ್ಷನ್ ನಮ್ಮವರೇ ಮಾಡುತ್ತಾರೆ, Appointments, transfers, inspections ಇಂಥ ಅಧಿಕಾರಗಳನ್ನೆಲ್ಲ ನಮ್ಮ ಕೈಯಲ್ಲೇ ಇಟ್ಟುಕೊಳ್ಳಬೇಕೆಂದು tentative decision ತೆಗೆದುಕೊಂಡಿದ್ದೇವೆ. ಇನ್ನೂ ಸ್ವಲ್ಪ details work out ಮಾಡಬೇಕು. ಇಲಾಖೆಯಿಂದ ವಿವರಗಳು ಬಂದ ಮೇಲೆ ಮಂತ್ರಿಮಂಡಲದ ಮುಂದೆ ಇಟ್ಟು ಆಖೈರು ತೀರ್ಮಾನವನ್ನು ತೆಗೆದುಕೊಳ್ಳುತ್ತೇವೆಂದು ಹೇಳಬಹುದು. ಮಾನ್ಯ ಸದಸ್ಯರಾದ ಮೂಡಲಗಿರಿಗೌಡರ ಅಭಿಪ್ರಾಯವನ್ನು ಮಂತ್ರಿಮಂಡಲದ ಮುಂದೆ

ಇಡುತ್ತೇನೆ. Cabinet decision ತೆಗೆದುಕೊಳ್ಳದೆ ನಾನು ಏನೂ ಮಾತನಾಡುವುದಿಲ್ಲ.

ಸೆಕೆಂಡರಿ ವಿದ್ಯಾಭ್ಯಾಸದ ವಿಚಾರದಲ್ಲಿ ನಮ್ಮಲ್ಲಿರುವ ಒಂದು ಸರ್ವೆ ರಿಪೋರ್ಟಿನಲ್ಲಿ 300 ಜನ ಸಂಖ್ಯೆ ಇದ್ದ ಕಡೆ ಒಂದು ಮೈಲಿ ಸುತ್ತಳತೆಯಲ್ಲಿ ಒಂದು ಪ್ರಾಥಮಿಕ ಶಾಲೆ ಇರಬೇಕು, ಮೂರು ನಾಲ್ಕು ಮೈಲಿ ಸುತ್ತಳತೆಯಲ್ಲಿ ಒಂದು ಮಾಧ್ಯಮಿಕಶಾಲೆ ಆಗಬೇಕು, ಐದರಿಂದ ಎಂಟು ಮೈಲಿ ಸುತ್ತಳತೆಯಲ್ಲಿ ಒಂದು ಹೈಸ್ಕೂಲ್ ಆಗಬೇಕು ಎಂದು ಮಾಡಿದ್ದಾರೆ.

Sri M. C. NARASIMHAN.—Why not make available to us a copy of the survey Report ?

Sri ANNA RAO GANAMUKHI.—I will see ; some copies can be placed on the Table of the House.

Education ಸರ್ವೆ ಪ್ರಕಾರ ನಮ್ಮಲ್ಲಿ 450 ಹೈಸ್ಕೂಲುಗಳು ಬೇಕಾಗುತ್ತವೆ. ಈಗ ಎರಡು ವರ್ಷಗಳಲ್ಲಿ 77 ಹೈಸ್ಕೂಲುಗಳನ್ನು ತೆರೆದಿದ್ದೇವೆ. ಈಗ ಹಾಲಿ 707 ಹೈಸ್ಕೂಲುಗಳಿವೆ. ಅದರಲ್ಲಿ 138 ಸರ್ಕಾರಿ ಶಾಲೆಗಳು, 175 ಸ್ಥಳೀಯ ಸಂಸ್ಥೆಗಳಿಗೆ ಸೇರಿದ್ದು ಮತ್ತು 394 ಖಾಸಗಿ ಶಾಲೆಗಳು. ಈ 707 ಹೈಸ್ಕೂಲುಗಳಲ್ಲಿ the number of Higher Secondary Institutions is 129 and the number of multipurpose High Schools is 60. ಹೈಯರ್ ಸೆಕಂಡರಿ ಹೈಸ್ಕೂಲುಗಳಲ್ಲಿ ಕೆಲವು ಕಡೆ ಮಲ್ಟಿ ಪರ್ಪಸ್ ಕೋರ್ಸ್ ಕೊಡಬೇಕೆಂದು ನಿರ್ಣಯ ಮಾಡಿ ಆ ಪ್ರಕಾರ equipment grant ಕೊಡುವ ದೃಷ್ಟಿಯಿಂದ, ಪೂರ್ವ ಸಿದ್ಧತೆಯನ್ನು ಮಾಡುವುದ ಕ್ಕೋಸ್ಕರ ಸಹಾಯವನ್ನು ಕೊಡುತ್ತೇವೆ. They are not actually Higher Secondary Schools but Multi-purpose High Schools. ಇಡೀ ಸಂಸ್ಥಾನದಲ್ಲಿರುವ ಮಲ್ಟಿ ಪರ್ಪಸ್ ಹೈಸ್ಕೂಲುಗಳ ಸಂಖ್ಯೆ 13. ಇವುಗಳಲ್ಲಿ ನಾಲ್ಕು ವರ್ಷದ ಶಿಕ್ಷಣ ಕೊಡಬೇಕು. ಈ ಶಾಲೆಗಳಿಂದ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳು ಪ್ರೀಯೂನಿವರ್ಸಿಟಿ ತರಗತಿಗಳಿಗೆ ಹೋಗುವುದಿಲ್ಲ, first year degree courseಗೆ ಹೋಗುತ್ತಾರೆ.ಮುಂದಿನ ವರ್ಷದಿಂದ ನಾವು eighth year syllabus introduce ಮಾಡುತ್ತಿದ್ದೇವೆ. ಮುಂದಿನ ವರ್ಷದಿಂದ ರಾಜ್ಯದ ಎಲ್ಲ ಕಡೆಗಳಲ್ಲಿಯೂ ವಿದ್ಯಾಭ್ಯಾಸದಲ್ಲಿ uniformity ತರಲೇಬೇಕೆಂದು ಹೇಳಿದ್ದಾರೆ. ಇಡೀ ಸಂಸ್ಥಾನದಲ್ಲಿ ಮೊದಲನೆಯ ಮತ್ತು ಎರಡನೆಯ ತರಗತಿಗಳಲ್ಲಿ ವಿದ್ಯಾಭ್ಯಾಸ uniform ಆಗಿದೆ. ಮೂರು ಮತ್ತು ನಾಲ್ಕನೆಯ ತರಗತಿಗಳಲ್ಲಿ ಈ ವರ್ಷ uniform ಆಗುತ್ತದೆ ಐದು ಮತ್ತು ಆರನೆಯ ತರಗತಿಗಳಲ್ಲಿ ಮುಂದಿನ ವರ್ಷ ಆಗುತ್ತದೆ. ಮತ್ತು ಏಳನೆಯ ತರಗತಿಯಲ್ಲಿ ಅದರ ಮಾರನೆಯ ವರ್ಷ ಆಗುತ್ತದೆ. ಅದೇ ರೀತಿ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಎಂಟನೆಯ ತರಗತಿಗೆ uniform syllabus ಆಗಿದೆ, ಈ ವರ್ಷದಿಂದ ಆ ತರಗತಿಯಲ್ಲಿ uniformity ಬರುತ್ತದೆ. ಹೀಗೆ 1963 ರಲ್ಲಿ ನಮ್ಮ ದೇಶದಲ್ಲಿ ವಿದ್ಯಾಭ್ಯಾಸದಲ್ಲಿ uniformity ಬಂದ ಹಾಗಾಗುತ್ತದೆ. ಈ ಕಾರ್ಯವನ್ನು ಒಂದೇ ವರ್ಷದಲ್ಲಿ ಮಾಡುವುದಕ್ಕಾಗುವುದಿಲ್ಲ ಮತ್ತು ಹಾಗೆ ಮಾಡಲೂ ಬಾರದು ಎಂದು ಹೇಳುತ್ತೇನೆ.

An HON'BLE MEMBER.—You have started from the Bottom.

Sri ANNA RAO GANAMUKHI.—Yes ; also from the top.

ಇನ್ನು number of trained teachers ಹೈಸ್ಕೂಲುಗಳಲ್ಲಿರುವವರನ್ನೂ ಇದರಲ್ಲಿ ಲೆಕ್ಕಕ್ಕೆ ತೆಗೆದುಕೊಂಡು ಹೇಳುವುದಾದರೆ, ಬೊಂಬಾಯಿ ಕರ್ನಾಟಕದಲ್ಲಿ 80% ನಷ್ಟು ಉಪಾಧ್ಯಾಯರುಗಳು trained ಆಗಿದ್ದಾರೆ. ಮದ್ರಾಸು ಕರ್ಣಾಟಕದಲ್ಲಿ 96% ನಷ್ಟಿದೆ. ಹಳೆಯ ಮೈಸೂರಿನಲ್ಲಿ ಶೇಕಡಾವಾರು ಬಹಳ ಕಡಮೆ ಇದೆ.

ಆ ಮೇಲೆ ಹೈಸ್ಕೂಲುಗಳನ್ನು ಕೊಟ್ಟಿರುವುದರಲ್ಲಿ ಬಹುಮಟ್ಟಿಗೆ ಹೈದರಾಬಾದ್ ಪ್ರದೇಶಕ್ಕೇ ಕೊಟ್ಟು ಕೊಂಡಿದ್ದಾರೆಂದು ಒಂದು ದೂರು ಬಂತು. 1957-58ನೆಯ ಇಸವಿಯಲ್ಲಿ 5 ಹೈಸ್ಕೂಲುಗಳನ್ನು ಒಟ್ಟು ಮಂಜೂರು ಮಾಡಿರುವಲ್ಲಿ ಒಂದು ಮಾತ್ರ ಹೈದರಾಬಾದ್ ಪ್ರದೇಶಕ್ಕೆ ಹೋಗಿದೆ. 1958-59 ರಲ್ಲಿ 14 ಹೈಸ್ಕೂಲುಗಳ ಪೈಕಿ ಮೂರು ಮಾತ್ರ ಹೈದರಾಬಾದ್ ಪ್ರದೇಶಕ್ಕೆ ಕೊಟ್ಟಿದೆ. ಬೊಂಬಾಯಿ ಪ್ರದೇಶಕ್ಕೆ ಒಂದೂ ಕೊಟ್ಟಿಲ್ಲ. 1959-60ರಲ್ಲಿ ಐದು ಹೈಸ್ಕೂಲು ಸಾಂಕ್ಷನ್ ಆಗಿವೆ. ಒಂದು ಗುಲ್ಬರ್ಗಕ್ಕೆ ಕೊಟ್ಟಿದೆ, ಬಾಕಿಯೆಲ್ಲಾ ಮಂಗಳೂರು ಕಾರವಾರ ಡಿಸ್ಟ್ರಿಕ್ಟ್‌ಗಳಿಗೆ ಹೋಗಿವೆ. ಹೀಗಿರುವಲ್ಲಿ ಹೈದರಾಬಾದ್ ಪ್ರದೇಶಕ್ಕೇ ಹೆಚ್ಚಿಗೆ ಹೈಸ್ಕೂಲುಗಳನ್ನು ಕೊಟ್ಟಿದೆಯೆನ್ನುವುದು ಸರಿಯಲ್ಲವೆಂದು ಹೇಳುತ್ತೇನೆ.

ಆ ಮೇಲೆ, Graduate Training Institutions ನಮ್ಮಲ್ಲಿ 9 ಇವೆ. ಬೆಂಗಳೂರು 2, ಮೈಸೂರು 2, ಗುಲ್ಬರ್ಗ ಒಂದು, ಧಾರವಾಡ 1 ; ಮಂಗಳೂರು 2.

ಪ್ರೈಮರಿ ಸ್ಕೂಲುಗಳಲ್ಲಿ mid-day meals ಸ್ಕೀಮು ಎಷ್ಟರಮಟ್ಟಿಗೆ ನಡೆಯುತ್ತಿದೆಯೆಂದು ಮಾನ್ಯ ಸದಸ್ಯರು ಕೇಳಿದರು. 1957–58ರಲ್ಲಿ 2 ಲಕ್ಷ ರೂಪಾಯಿಗಳನ್ನು ಕೊಟ್ಟಿತ್ತು. 17,000 ಜನ ಹುಡುಗರು ಲಾಭ ಹೊಂದಿದರು. 1958--59ರಲ್ಲಿಯೂ 2 ಲಕ್ಷ ಕೊಟ್ಟಿತ್ತು; 35,000 ಹುಡುಗರು ಅನುಕೂಲ ಪಡೆದರು. 1959-60ರಲ್ಲಿ ಕೊಟ್ಟಿದ್ದ 2 ಲಕ್ಷ ರೂಪಾಯಿಗಳಿಂದ 40,000 ಹುಡುಗರು ಲಾಭ ಪಡೆದರು. ಹೀಗೆ ವರ್ಷೇ ವರ್ಷೇ ಜಾಸ್ತಿ ಹುಡುಗರು ಮುಂದೆ ಬರುತ್ತಿದ್ದಾರೆ. ಈ ಹಣ ಬಹಳ ಕಡಮೆ. ಇದನ್ನು ಇನ್ನೂ ಹೆಚ್ಚಿಗೆ ಮಾಡಬೇಕು.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಒಬ್ಬ ಹುಡುಗನಿಗೆ ಎಷ್ಟು ಕೊಡುತ್ತೀರಿ ?

ಶ್ರೀ ಅಣ್ಣಾರಾವ್ ಗಣಮುಖಿ.—6 ನಯಾ ಪೈಸಾ ಸರ್ಕಾರದವರು ಕೊಡುತ್ತಾರೆ; ಇನ್ನು ಆರು ನಯಾ ಪೈಸಾವನ್ನು ಜನರು ಕೊಡಬೇಕು.

ಒಬ್ಬ ಸದಸ್ಯರು.—ಅಲ್ಲಿನ ಅಡಿಗೆಯವನ ಸಂಬಳವನ್ನು ಸರ್ಕಾರದವರು ವಹಿಸಿಕೊಂಡರೆ ಎಷ್ಟೋ ಅನುಕೂಲವಾಗುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—Management ನವರು ಯಾರ ಯಾರ ಸಹಾಯಬೇಕೆಂದು ಹೇಳಿದ್ದಾರೋ ಅದನ್ನು ನೋಡಿ ಏರ್ಪಾಡು ಮಾಡಿದೆ. cookಗೂ ಸರ್ಕಾರದವರೇ ಸಂಬಳ ಕೊಡಬೇಕೆಂದು ಹೇಳಿದರೆ, ಅದೇ ಒಂದು ಬೇರೆ staff ಆಗುತ್ತದೆ.

ಒಬ್ಬ ಸದಸ್ಯರು.—ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಏನು ಅನುಕೂಲ ಮಾಡಿದ್ದೀರಿ ?

ಶ್ರೀ ಅಣ್ಣಾರಾವ್ ಗಣಮುಖಿ.—ಈ ಸಾರಿ 65,800 ಹೆಣ್ಣು ಮಕ್ಕಳಿಗೆ ಈ ರೀತಿ mid-day meals ಅನುಕೂಲ ದೊರೆತಿದೆ. ಇಷ್ಟು ಪ್ರೋತ್ಸಾಹ ಕೊಟ್ಟು ಮಾಡಿದರೂ, 6–7ನೆಯ ತರಗತಿಯಾದ ಮೇಲೆ continue ಮಾಡದೆ ಇದ್ದರೆ ಏನೂ ಪ್ರಯೋಜನವಿಲ್ಲ.

ಶ್ರೀ ಎಫ್. ಎಚ್. ಮೊಹಿಸಿನ್.—ಮಿಡ್ ಡೇ-ಮೀಲ್ ಸ್ಕೀಮು ಬರಿಯ ಉತ್ತರಕರ್ಣಾಟಕದ ಹುಡುಗರಿಗೆ ಮಾತ್ರ ಅನ್ವಯಿಸಬೇಕೆಂದು ಮಾಡಿದ್ದೀರಾ?

ಶ್ರೀ ಅಣ್ಣಾರಾವ್ ಗಣಮುಖಿ.—ಹಾಗೇನೂ ಇಲ್ಲ. ಜನರು ಹುಡುಗರ ವಿದ್ಯಾಭ್ಯಾಸಕ್ಕೆ ಹೇಗೆ ಕಟ್ಟಡಗಳನ್ನು ಕಟ್ಟಿಸಿ ಕೊಡುತ್ತಾರೋ ಹಾಗೆಯೇ ಹುಡುಗಿಯರಿಗೂ ಕಟ್ಟಿಸಿ ಕೊಟ್ಟರೆ ಪರವಾಯಿಲ್ಲ, ಸರ್ಕಾರದವರು ಹರಿಜನ ಹುಡುಗಿಯರಿಗೆ ಏನಾದರೂ ಮಾಡಬಹುದೇ ಹೊರತು ಬೇರೆ ಎಲ್ಲಾ ಹುಡುಗಿಯರಿಗೂ ಅದೇರೀತಿ ಮಾಡುವುದು ಕಷ್ಟ.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಜನರು 75% ಕೊಡುತ್ತೇವೆಂದು ಹೇಳಿ ಮುಂದೆ ಬಂದರೂ, ತಾವು ಕಟ್ಟಡ ಬೇಗ ಸ್ಯಾಂಕ್ಷನ್ ಮಾಡುವುದಕ್ಕೆ ಬದಲು ವೃಥಾ ಅನಾವಶ್ಯಕವಾದ queries ಹಾಕುತ್ತಿರುವುದನ್ನು ಕಡಮೆ ಮಾಡುವಂತೆ ಮಾಡುತ್ತೀರಾ? ಮೊದಲೇ 75%ನಷ್ಟು ಹಣವನ್ನು deposit ಮಾಡಬೇಕೆಂದೇನೂ ಇಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ಬರಿಯ ಮಾತಿನ ಮೇಲೆ ಸರ್ಕಾರದವರು 10,000 ರೂಪಾಯಿನ ಒಂದು ಕಟ್ಟಡವನ್ನು ಕೈಕೊಂಡರೆ, ಕೊನೆಗೆ ಜನರು ಕೊಡಬೇಕಾದ ಹಣ ಬಾರದೆ ಹೋದರೆ, ಕಟ್ಟಡವನ್ನು ಪೂರ್ತಿ ಮಾಡದೆ ಮಧ್ಯದಲ್ಲೇ ಬಿಡುವುದಕ್ಕಾಗುತ್ತದೆಯೇ? ಆದುದರಿಂದ ಸರ್ಕಾರದವರು ಶುರು ಮಾಡುವ ಮುನ್ನ ಜನರ ಪಾಲಿನ ಹಣ ಬರುತ್ತದೆಂಬ assurance ಇರಬೇಕು. ಆದುದರಿಂದ ಈ ಹಣ ಕಟ್ಟಬೇಕೆಂದು ಹೇಳುತ್ತಿದ್ದಾರೆ. ಇದು ಸ್ವಲ್ಪ ಕಷ್ಟ, ನಿಜ. ಏನಾದರೂ Work bills ನೋಡಿಕೊಂಡು ಹಣ ಕೊಡುವ ವಿಚಾರವನ್ನು ಫೈನಾನ್ಸ್ ಮಿನಿಸ್ಟರೊಡನೆ ಆಲೋಚನೆ ಮಾಡಿ ಏರ್ಪಾಡು ಮಾಡಬೇಕೆಂದು ಮಾಡಿದ್ದೇವೆ.

ಆಮೇಲೆ, Teacher-Pupil Ratio ನೋಡುವುದಾದರೆ, ಹಾಲಿ 1:33 ಇದೆ. ಮುಂದೆ compulsory ಪ್ರೈಮರಿ ವಿದ್ಯಾಭ್ಯಾಸ ಜಾರಿಗೆ ಬಂದಮೇಲೆ ಇದು 1 : 40 ಆಗಬಹುದು.

ನಮ್ಮಲ್ಲಿ Inspecting Staffನ್ನು ಆದಷ್ಟು ಮಟ್ಟಿಗೆ ನ್ಯಾಷನಲೈಸು ಮಾಡಬೇಕೆಂದು ಯೋಚನೆ ಮಾಡಲಾಗುತ್ತಿದೆ.

7 P.M.

ಶ್ರೀ ಮಲ್ಲಾರಾಧ್ಯರವರು ಪ್ರಮೋಷನ್ ಗ್ರೇಡುಗಳ ಬಗಗೆ ಹೇಳಿದರು. ಈಗ ಈ ಪ್ರಮೋಷನ್ನು ಗ್ರೇಡುಗಳನ್ನು ಯೂನಿಫಾರಂ ಆಗಿ ಮಾಡಿದ್ದೇವೆ. ಎಂದರೆ 1 to 4 ಎಂದು ಮಾಡಲಾಗಿದೆ. ಇಡಿಯ ಸ್ಟೇಟಿನಲ್ಲಿ ಮಾಡಲಾಗಿದೆ. ಹೈದರಾಬಾದಿನಲ್ಲಿ ಒಂದು ರೀತಿ ಇತ್ತು, ಮದ್ರಾಸಿನಲ್ಲಿ 1 to 2 ಇತ್ತು, ಕೊಡಗಿನಲ್ಲಿ Running Grade 100 to 300, ಬೊಂಬಾಯಿನಲ್ಲಿ ಶೇಕಡಾ 5ರಷ್ಟು ಇತ್ತು, ಇವನ್ನೆಲ್ಲಾ ಪರಿಶೀಲಿಸಿ ಯೂನಿಫಾರಂ ಆಗಿ ಮಾಡಿ ಆರ್ಡರುಗಳನ್ನು ಜಾರಿ ಮಾಡಿದ್ದೇವೆ.

ಹೈದರಾಬಾದು ಏರಿಯಾದಲ್ಲಿ Administrative Work ಗಳೆಲ್ಲಾ School Board ನಲ್ಲಿ ಮಾಡಲಾಗುತ್ತಿತ್ತು. ಇದರಿಂದ ಅಲ್ಲಿನ ರೇಂಜು ಇನ್ಸ್‌ಪೆಕ್ಟರುಗಳು ಬರಿಯ ಇನ್ಸ್‌ಪೆಕ್ಷನ್ನು ವರ್ಕ್‌ಗಳನ್ನು ಮಾಡುತ್ತಾರೆ. ಇದರಿಂದ Administrative work ಗಾಗಿಯೇ ಹೆಚ್ಚಿನ ಕಾಲ ವೆಚ್ಚವಾಗುತ್ತಿಲ್ಲ. ಮೈಸೂರಿನ ಕಡೆಗಳಲ್ಲಿ ಎಲ್ಲ ಕೆಲಸಗಳೂ ಇನ್ಸ್‌ಪೆಕ್ಟಿಂಗ್ ಆಫೀಸರುಗಳಿಗೇ ಇರುವುದರಿಂದ ಹೆಚ್ಚಿನ ಕೆಲಸಗಳನ್ನು ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕಾಗಿ Administrative work ನ್ನೆಲ್ಲಾ ಸ್ಕೂಲು ಬೋರ್ಡುಗಳಿಗೇ ಕೊಟ್ಟರೆ ಈ ಕೆಲಸಗಳನ್ನು ಮಾಡಲು ಸುಲಭವಾದೀತು ಎಂದು ಯೋಚಿಸಿದ್ದೇನೆ.

ಇನ್ನು ಟೆಕ್ಸ್ಟ್‌ಬುಕ್ ಕಮಿಟಿಯ ಬಗ್ಗೆ ಹೇಳುತ್ತಾ ಕಾಲಕ್ಕೆ ಸರಿಯಾಗಿ ಪುಸ್ತಕಗಳು ಬರುತ್ತಿಲ್ಲ ಎಂದು ಮಾನ್ಯ ಸದಸ್ಯರು ತಿಳಿಸಿದರು. ಇದರ ಪ್ರೊಸೀಜರಿನಲ್ಲಿರುವ ಕೆಲವು ತೊಂದರೆಗಳಿಂದಾಗಿ ಹೀಗಾಗುತ್ತಿದೆ ಎಂದು ನನಗೆ ಅನಿಸುತ್ತಿದೆ. ಟೆಕ್ಸ್ಟ್‌ಬುಕ್ ಕಮಿಟಿಯಿಂದ ಪುಸ್ತಕಗಳನ್ನು ಬರೆಸಿದ್ದರೂ, ಅವರಿಗೆ ಕಾಗದ ಸಿಕ್ಕುವುದಿಲ್ಲ ಎನ್ನುತ್ತಾರೆ. ಆಗ ಸರಕಾರವೇ ಕಾಗದವನ್ನು ತರಿಸಿಕೊಡಬೇಕಾಗುತ್ತದೆ. ಈಗ ಇರುವ ಸರಕಾರಿ ಪ್ರೆಸ್ಸಿಗೆ ಕೆಲಸ ಎಷ್ಟು ಹೆಚ್ಚಿದೆ ಎಂದರೆ ಅದು ಹೇಳಲಸಾಧ್ಯವಾಗಿದೆ. ಇದಕ್ಕಾಗಿಯೇ ಬೇರೆ ಪ್ರೆಸ್ ಮಾಡುವ ಯೋಚನೆ ಇದೆ. ಪ್ರೈವೇಟಾಗಿ ಟೆಂಡರುಗಳನ್ನು ಕರೆದು ಕೊಟ್ಟರೂ ವೇಳೆಗೆ ಸರಿಯಾಗಿ ಪುಸ್ತಕ ಬರುವುದಿಲ್ಲ. ನಮ್ಮ ಟೆಕ್ಸ್ಟ್‌ಬುಕ್ ಕಮಿಟಿಯ ಮೂಲಕ ಪುಸ್ತಕಗಳನ್ನು ಆದಷ್ಟು ಬೇಗನೆ ತರಬೇಕು ಎಂದು ಮಾಡಬೇಕೆಂದಿದೆ. ಇಲ್ಲಿ ಯಾವ ವಿಳಂಬವೂ ಆಗುತ್ತಿಲ್ಲ. ಪ್ರೈವೇಟಾಗಿ ಮಾಡುವವರಿಗೆ ಭದ್ರಾವತಿಯಿಂದ ಬೇಗನೆ ಕಾಗದ ಬರುವುದಿಲ್ಲ. ಇದರಿಂದ ನಿಧಾನವಾಗುತ್ತದೆ. ಇನ್ನು ಕೆಲವರು ಟೆಂಡರನ್ನು ಕೊಡುವವರು Lowest Tender ಎಂದು ಲಸ್ವನ್ನೇ ನೋಡಿ ಕೊಟ್ಟಿರುತ್ತಾರೆ. ಆದರೆ ಅವರ Capacity ನೋಡಿದರೆ ಅವರಿಗೆ ಕೊಡುವ ಒಂದು ವರ್ಷದೊಳಗೆ ಪುಸ್ತಕಗಳನ್ನು ಕೊಡುತ್ತಾರೋ ಇಲ್ಲವೋ ಹೇಳಲಿಕ್ಕೆ ಸಾಧ್ಯವಿಲ್ಲ. Text Book Comittee ಯು ಸಲುವಾಗಿ ನಿಧಾನವಾಗುತ್ತಿಲ್ಲ, ಇದರ ವರ್ಕಿಂಗ್‌ನಲ್ಲಿ ಸ್ವಲ್ಪ ನಿಧಾನವಾಗುತ್ತಿದೆ. ಯಾರಾದಾರೂ Delay ಮಾಡಿದ್ದಾರೆಂದು ತಿಳಿದರೆ ನಾನು ಅವರನ್ನು Save ಮಾಡುವುದಿಲ್ಲ.

ಶ್ರೀ ಟಿ. ಎನ್ ಮೂಡಲಗಿರಿಗೌಡ.—ತಮಗೆ ವರ್ಕಿಂಗ್ ಡಿಫಿಕಲ್ಟೀಸ್ ಹೀಗೆ ಹೀಗಿವೆ ಎಂದು ಇಲ್ಲ Express ಮಾಡುವುದು ಸರಿಯಲ್ಲ, ಪ್ರೆಸ್ ತೆಗೆಯಬೇಕಾದರೆ ಪ್ರೆಸ್ಸನ್ನು ತೆಗೆಯಿರಿ. Where is the difficulty for the Government?

ಶ್ರೀ ಅಣ್ಣಾರಾವ್ ಗಣಮುಖಿ.—ಇವೊತ್ತಿನ ದಿವಸ ಪುಸ್ತಕಗಳು ಸಿಕ್ಕುವುದಿಲ್ಲ ಎಂದು ಹೇಳಿದುದರ ಮೇಲೆ ಹೇಳುತ್ತಿದ್ದೇನೆ.

SRI F. H. MOHSIN.—Will there be uniformity in text-works in the whole State?

ಶ್ರೀ ಅಣ್ಣಾರಾವ್ ಗಣಮುಖಿ.—I, II, III ಮತ್ತು IV ಇವುಗಳನ್ನೆಲ್ಲಾ ಯೂನಿಫಾರಂ ಮಾಡಬೇಕೆಂಬ ಉದ್ದೇಶವಿದೆ. ಈಗ ಹೊಸದಾಗಿ ಈ ಟೆಕ್ಸ್ಟ್ ಬುಕ್ಕುಗಳಿಗೇ ಪ್ರೆಸ್ ಮಾಡಬೇಕೆಂದು ಪ್ರಯತ್ನ ಮಾಡಿದರೆ ಅದಕ್ಕೆ ಮೆಷಿನರಿ ಇತ್ಯಾದಿಗಳು ಬರಲು Foreign Exchange ನ ತೊಂದರೆಗಳಿವೆ. ಈಗ ಬೆಂಗಳೂರಿನಲ್ಲಿನ ಪ್ರೆಸ್ಸಿನಲ್ಲಿ ಮತ್ತು ಮೈಸೂರಿನ ಪ್ರೆಸ್ಸಿನಲ್ಲಿ ಕೆಲಸಗಳು ಬಹಳ ಹೆಚ್ಚಿವೆ ಈ ರೀತಿ

ಯಾಗಿ ಕೆಲಸಗಳು ಹೆಚ್ಚಾಗಿರುವ ಕಾರಣ ಪ್ರೈವೇಟಾಗಿ ಬೇರೆ ಪ್ರೆಸ್ಸುಗಳಿಗೂ ಕೆಲಸಗಳನ್ನು ಕೊಡಬೇಕೆಂದು ಯೋಚಿಸಿ ಧಾರವಾಡ, ಮಂಗಳೂರು ಈ ಭಾಗಗಳಿಗೂ ಕೊಡಲಾಗಿತ್ತು. ಇದರಿಂದ ಹದಿನೈದು ದಿನಗಳು ನಿಧಾನವಾಗಿ ಪುಸ್ತಕಗಳು ಬಂದುವು. ಹಿಂದೆ ಈ ಟೆಕ್ಸ್ಟ್ ಬುಕ್ಕುಗಳಿಗೆ ಸರಿಯಾದ ನಿಯಮಗಳನ್ನು ಮಾಡಿರಲಿಲ್ಲ. ಈಚೆಗೆ Printing and Publishers ಇವುಗಳ ರೂಲ್ಸುಗಳನ್ನು tighten ಮಾಡಲಾಗಿದೆ. ಇವರಿಂದ ಸರಿಯಾದ ಸೆಕ್ಯೂರಿಟಿಗಳನ್ನು ತೆಗೆದುಕೊಂಡು, ಸಕಾಲದಲ್ಲಿ ಪುಸ್ತಕಗಳನ್ನು ಪ್ರೈವೇಟ್ ಬುಕ್ ಡಿಪೋಗಳು ಸಪ್ಲೈ ಮಾಡದಿದ್ದರೆ ಪೆನಾಲ್ಟಿಯನ್ನೂ ಕೊಡುವಂತೆ ನಿಯಮ ಮಾಡಲಾಗಿದೆ. ಇಷ್ಟು ಮಾಡಿದರೂ ಇನ್ನೂ ಸಕಾಲಕ್ಕೆ ಬರುತ್ತಿಲ್ಲ, ಸರಕಾರ ಬೇಕಾಗಿ delay ಮಾಡುತ್ತಿದೆ ಎಂದು ಹೇಳುವುದನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ ಎಂದು ನಾನು ವಿನಯದಿಂದ ಬೇಡಿಕೊಳ್ಳುತ್ತೇನೆ.

ಇನ್ನು Secretariat ನಲ್ಲಿ ಬಹಳ Delay ಯಾಗುತ್ತಿದೆ ಕೆಲಸವು ಆಗುವುದಿಲ್ಲ ಎಂದು ಹೇಳಿದ್ದಾರೆ. ನನಗಾದರೋ ಅನಿಸುವುದು, ಈಗ ಸೆಕ್ರೆಟೇರಿಯಟ್ ನಲ್ಲಿ ನಡೆಯುವ ಕೆಲಸಗಳ ಬಗ್ಗೆ ಹೀಗೆ ಹೇಳಿರುವುದು unfair criticism ಆಗುತ್ತದೆ. ಯಾವುದಾದರೂ ಕಾಗದ ಸೆಕ್ರೆಟರಿಯವರಲ್ಲಿಗೆ ಬಂದರೆ ಸರ್ವಿಸ್ಸುಗಳ ಬಗ್ಗೆ ಆಗಿದ್ದರೆ G.A.D.ಗೆ refer ಮಾಡಬೇಕಾಗುತ್ತದೆ. ಮತ್ತೆ Increase of salary ಇತ್ಯಾದಿಗಳ ಬಗ್ಗೆ ಬಂದರೆ Finance ಶಾಖೆಗೆ ಹೋಗಬೇಕಾಗುತ್ತದೆ. ಇನ್ನು ಕೆಲವು ಪೇಪರುಗಳ ಬಗ್ಗೆ ನಾನೇ ಎಷ್ಟೋ ಬೆನ್ನುಹತ್ತಿದರೂ ಅವು ಸರಿಯಾಗಿ ಬರುವುದಿಲ್ಲ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಎಲ್ಲರನ್ನೂ ಸೇರಿಸಿ ಒಂದು ಕಮಿಟಿ ಮಾಡಿ ಅವರಿಂದ ಒಂದು ತೀರ್ಮಾನ ತೆಗೆದುಕೊಂಡು ಮಾಡುವುದು ಒಳ್ಳೆಯದಲ್ಲವೇ? (ನಗು)

ಶ್ರೀ ಅಣ್ಣಾರಾವ್ ಗಣಮುಖಿ.—ಆ ರೀತಿಯಾದ ಕಮಿಟಿ ಮಾಡಲು ಸಾಧ್ಯವಿಲ್ಲ. ಕೆಲವು ಶಾಖೆಗಳಲ್ಲಿನ ಆಫೀಸರುಗಳು ರಾತ್ರಿಯಲ್ಲಿ ಇದ್ದು ಕೆಲಸ ಮಾಡುತ್ತಿದ್ದಾರೆ. ಅವರಿಗೆ Extra Allowance ಕೂಡ ಕೊಡುತ್ತಿಲ್ಲ. ಇಷ್ಟೆಲ್ಲಾ ಕೆಲಸ ಮಾಡುವಂತಹ ಜನರಿಗೆ ಇವೊತ್ತು ಅವರ ಬಗ್ಗೆ ಇಲ್ಲ ಮಾತನಾಡಬೇಕಾದರೆ ಸರಿ ಕಾಣುವುದಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಕೆಲವು ಜನ ಅಧಿಕಾರಿಗಳು ಬಹಳ conscentious ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ಹೇಗೆ ಮಾಡುತ್ತಿದ್ದಾರೆನ್ನುವುದು ನನಗೆ ಗೊತ್ತು. Filesಗಳು ಹೇಗೆ ಓಡಾಡುತ್ತವೆ ಎನ್ನುವುದೂ ನನಗೆ ಗೊತ್ತು. ಏನೋ ಕೆಲವರು case workers, ಸಣ್ಣ ಕ್ಲಾರ್ಕುಗಳು, ಟೈಪಿಸ್ಟುಗಳು ಇತ್ಯಾದಿ ಕೆಲವರು ಚಹಾ ಕುಡಿಯಲಿಕ್ಕಾಗಿ ಹೊರಗೆ ಬರಬಹುದು. ಆದರೆ ಆಫೀಸರುಗಳ ಮಟ್ಟಿಗೆ ಹೇಳುವುದಾದರೆ ಅವರು ಬಹಳ ಜಾಗೃತರಾಗಿ ಕೆಲಸ ಮಾಡುತ್ತಾರೆ. ಅವರು ಹೆಚ್ಚಿಗೆ ಇನ್ನೂ ವಿಶೇಷವಾಗಿ strain ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಅಂತಹವರ ಬಗ್ಗೆ ಹೇಳಿದರೆ ಅವರು ಇನ್ನೂ ಇಪ್ಪತ್ತು ನಾಲ್ಕು ತಾಸು ಬೇಕಾದರೂ ಕೆಲಸ ಮಾಡಬಲ್ಲರು.

ಶ್ರೀ ಟಿ. ಎನ್. ಮೂಡಲಗಿರಿಗೌಡ.—ಪೇಪರುಗಳು ಎರಡೆರಡು ಮೂರು ಮೂರು ತಿಂಗಳ ಮೇಲೆ ನಿಂತಿರುತ್ತವೆ. ಮೂರು ತಿಂಗಳಾದರೂ ಬಂದಿರುವ ಕಾಗದದ ಮೇಲೆ ಕೆಲಸವಾಗುತ್ತಿಲ್ಲ ಎನ್ನುವ ಪರಿಸ್ಥಿತಿ ನೋಡಿ ತಮ್ಮ ಗಮನಕ್ಕೆ ತರಲಾಗಿದೆ. ಅಲ್ಲೆಲ್ಲಾ ಕೆಲಸ ಮಾಡುತ್ತಿದ್ದಾರೆಂದು ಹೇಳಿದರೆ ಹೇಗೆ?

ಶ್ರೀ ಅಣ್ಣಾರಾವ್ ಗಣಮುಖಿ.—ತಮ್ಮ ದೃಷ್ಟಿಯಿಂದ ಹೇಳುತ್ತಿಲ್ಲ. ಇದರ ಪರಿಣಾಮವೇನಾಗುತ್ತದೆ ಎಂದರೆ ತಮ್ಮ ಮುಂದೆ ವಿವರಗಳನ್ನೆಲ್ಲಾ ಹೇಳಬಹುದು. ಎಲ್ಲ ಕಡೆಯೂ ಸಕಾಲದಲ್ಲಿ ಸರಿಯಾಗಿ ಆಗುತ್ತಿದೆ ಎಂದು ಹೇಳುತ್ತಿಲ್ಲ. Delay ಆಗಿರಬಹುದು. ಹಾಗೆ ಮಾಡಲು Dictatorship ನಂತೆ ಮಂತ್ರಿಗಳು ಕಾಗದ ಬಂದ ಕೂಡಲೆ "Yes" or "No" ಎಂದು ಆರ್ಡರು ಮಾಡುವುದು ಕಷ್ಟ. Democratic working ನಲ್ಲಿ delays ಆಗತಕ್ಕ scope ಇದೆ. ಶ್ರೀ ಮಲ್ಲಾರಾಧ್ಯರಿಗೆ ಇದೆಲ್ಲ ಗೊತ್ತಿದೆ. ಯಾವ ಪ್ರಕಾರ ಕೆಲಸವಾಗುತ್ತಿದೆ ಏನು ಎನ್ನುವುದು ಇತರರಿಗೂ ಗೊತ್ತಿದೆ.

Sri C. K. RAJAIAH SETTY.—Are you going to plead that it is impossible to show any improvement?

Sri ANNA RAO GANAMUKHI.—Certainly, with all these bottlenecks we have shown definite improvement. ಶ್ರೀ ನಾಗನಗೌಡರ ಕಮಿಟಿಯ ವರದಿ ವಿಷಯವಾಗಿ ಶ್ರೀ ಶಿವಪ್ಪನವರು ಮತ್ತು ಇತರ ಸದಸ್ಯರು ರಚನಾತ್ಮಕವಾದ ಸಲಹೆಗಳನ್ನು ಕೊಟ್ಟರು. ಮುಂದೆ ಫೈನಲ್ಲಾಗಿ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಾಗ ಮಾನ್ಯ ಸದಸ್ಯರ ಸಲಹೆಗಳನ್ನು ಪರಿಶೀಲನೆ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಹುದು.

ಇನ್ನು ಶ್ರೀ ಚಾಮಯ್ಯನವರು ಹೈಸ್ಕೂಲು ಬಿಲ್ಡಿಂಗುಗಳು ಸರಿಯಾಗಿಲ್ಲ; ಇದರಿಂದ ವಿದ್ಯಾರ್ಥಿಗಳಿಗೆ ಅಸೌಕರ್ಯ ಹೆಚ್ಚು ಎಂದು ಆರೋಪಿಸಿದರು. ಎಲ್ಲೆಲ್ಲಿ ಹೈಸ್ಕೂಲು ಕಟ್ಟಡಗಳಾಗಬೇಕು ಎಂಬ ಬಗ್ಗೆ ಅವರು ನನಗೊಂದು ಪತ್ರ ಬರೆದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಟ್ರೈನ್ಡ್ ಟೀಚರ್ಸನ್ನು ಸರ್ಕಾರಿ ನೌಕರಿಗೆ ಸೇರಿಸಿಕೊಳ್ಳುವ ವಿಚಾರದ ಮೇಲೆ ಅವರಿಂದ ಒಂದು ರೀತಿಯಾದಂಥ ಆರೋಪಣೆ ಬಂತು. ಇರತಕ್ಕಂಥ ಉಪಾಧ್ಯಾಯರಿಗೆ ಹೆಚ್ಚಿಗೆ ಟ್ರೈನಿಂಗ್ ಕೊಡುವ ವ್ಯವಸ್ಥೆಯನ್ನೂ, ಆರೀತಿ ಶಿಕ್ಷಣ ಹೊಂದಿದ ಉಪಾಧ್ಯಾಯರನ್ನು ಶಾಲೆಗಳಲ್ಲಿ ನೇಮಕ ಮಾಡುವ ವ್ಯವಸ್ಥೆಯನ್ನು ಸಹ ಪರಿಶೀಲನೆ ಮಾಡಲಾಗುತ್ತದೆ. ಇನ್ನೊಬ್ಬ ಮಾನ್ಯ ಸದಸ್ಯರು ಉಪಾಧ್ಯಾಯರುಗಳು ಪ್ರೈವೇಟಾಗಿ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅದರಲ್ಲೂ, ಯೂನಿವರ್ಸಿಟಿ ಪರೀಕ್ಷೆಯನ್ನು ಮದ್ರಾಸ್‌ನಲ್ಲಿರತಕ್ಕ ಕ್ರಮದಂತೆ ಇಲ್ಲಿಯೂ ಜಾರಿಗೆ ತರಬೇಕೆಂದು ಹೇಳಿದರು. ಆ ವಿಷಯ ಸರ್ಕಾರಕ್ಕೆ ಸಂಬಂಧಪಟ್ಟಿದ್ದಲ್ಲ ಅದು ಯೂನಿವರ್ಸಿಟಿಯಲ್ಲಿ ಪರಿಶೀಲನೆಯಾಗಿ ತೀರ್ಮಾನವಾಗಬೇಕಾಗಿದೆ.

ಶ್ರೀ ವೆಂಕಟೇಗೌಡರು ಮಾತನಾಡುತ್ತಾ, ವಿದ್ಯಾಭ್ಯಾಸದ ಇಲಾಖೆಯಲ್ಲಿ ಒಬ್ಬ ಜಾಯಿಂಟ್ ಡೈರೆಕ್ಟರ್ ಇರಬೇಕು ಎಂದು ಹೇಳಿದರು. ಅದು ವೈಯುಕ್ತಿಕವಾಗಿ ಡಿ.ಪಿ.ಐ. ಆಫೀಸು ಕೆಲಸವಾಗಿದೆ. ಅವರು ಈ ಡಿಸಿಪ್ಲಿನ್ ಮೊದಲು ತೆಗೆದುಕೊಳ್ಳಬೇಕಾಗಿತ್ತು. ಶಂಖದಿಂದ ಬಂದರೆ ಅದು ತೀರ್ಥವಾಗುತ್ತದೆ ಎನ್ನುವ ಹಾಗೆ ಅವರು ಅದನ್ನು ಮೊದಲು ಯೋಚನೆ ಮಾಡಬೇಕು. ಅದನ್ನು ಅನಂತರ ಸರ್ಕಾರ ಪರಿಶೀಲಿಸುತ್ತದೆ.

Sri J. B. MALLARADHYA.—In regard to the appointment of Joint Director I wish to say that decision on this matter should be taken quickly.

Sri ANNA RAO GANAMUKHI.—Yes. Now I will make out a case and send it to the Finance Department.

ನಾನು ತಮಗೆ ಹೇಳಬೇಕಾದರೆ ಶೇಕಡ 40 ರಷ್ಟು ಪ್ರೈಮರಿ ವಿದ್ಯಾಭ್ಯಾಸಕ್ಕಾಗಿ ಗ್ರಾಂಟು ಕೊಟ್ಟಿದ್ದರೂ ಜನಗಳಿಗೆ ಹೆಚ್ಚಿಗೆ ಸೌಕರ್ಯ ಸಿಕ್ಕಿಲ್ಲವೆಂದು ಕೆಲವರು ಹೇಳಿದ್ದಾರೆ. ನಮಗೆ ಮ್ಯಾಚಿಂಗ್ ಗ್ರಾಂಟು ಶೇಕಡ 60 ರಷ್ಟು ಕೊಡುವುದಾದರೆ ಆಗ ಸರಿಹೋಗುತ್ತದೆ. ಇಲ್ಲದಿದ್ದರೆ ನಾವು ಈ ನಮ್ಮ ಯೋಜನೆಯಲ್ಲಿ ಎಷ್ಟು ಪ್ರೈಮರಿ ಸ್ಕೂಲುಗಳನ್ನು ಕೊಡಬೇಕೋ ಅದಕ್ಕಿಂತ ಕಡಮೆಯಾಗಿ ಕೊಡಬೇಕಾಗುತ್ತದೆ. ಶ್ರೀ ಶಿವಪ್ಪನವರು ಗ್ರಾಂಟನ್ನು ಶೇಕಡ 50ರಷ್ಟಾದರೂ ಏರಿಸಿ ಎಂದು ಹೇಳಿದ್ದಾರೆ.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಈ ಬಾಬಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ?

ಶ್ರೀ ಅಣ್ಣಾರಾವ್ ಗಣಮುಖಿ.—ಸ್ಕೂಲು ಬಿಲ್ಡಿಂಗಿಗಾಗಿ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಈಗ ಎಲ್ಲೆಲ್ಲಿ ಉಳಿತಾಯ ಇದೆಯೋ ಅಲ್ಲೆಲ್ಲಾ ಪರಿಶೀಲನೆ ಮಾಡುತ್ತಿದ್ದೇವೆ, ಯಾವ ಯಾವ ಸ್ಕೀಮಿಗೆ ಎಷ್ಟೆಷ್ಟು ಹಣ ಹಾಕಬೇಕೋ ಅಷ್ಟನ್ನು ಹಾಕುತ್ತಿದ್ದೇವೆ. ಎಲ್ಲಿ ಡಿಫಿಕಲ್ಟಿ ಬರುತ್ತದೋ ಅಲ್ಲಿ ಅದನ್ನು ಸರಿ ಮಾಡುತ್ತಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಪ್ರತಿಯೊಂದು ಜಿಲ್ಲೆಯಲ್ಲೂ ಲೋಕಲ್ಲಾಗಿ ಸಿಕ್ಕತಕ್ಕ ಮೆಟೀರಿಯಲ್ಸ್‌ನ್ನು ಉಪಯೋಗಿಸಿ, ಸ್ಕೂಲು ಕಟ್ಟಡಗಳನ್ನು ಕಟ್ಟಲಿಕ್ಕೆ ಈಗ ಬಹಳ ತೊಂದರೆಯಾಗಿದೆ. ಅದರ ಪ್ರಕಾರ ಎಷ್ಟು ಹಣಬೇಕೋ ಅಷ್ಟು ಹಣವನ್ನು ಸರ್ಕಾರ ಕೊಡುತ್ತಿಲ್ಲ. You are insisting on only one particular design.

ಶ್ರೀ ಅಣ್ಣಾರಾವ್ ಗಣಮುಖಿ.—ಲೋಕಲ್ ಮೆಟೀರಿಯಲ್ಸ್ ಹಾಕಬೇಡಿ ಎಂದು ಯಾವಾಗಲೂ ಹೇಳಿಲ್ಲ. ಇಂತಹ ಮಾಡಲ್ ಪ್ರಕಾರ ಎಂದು ರೂಲ್ಸ್ ಇದೆ. ಆ ಪ್ರಕಾರ ಉಪಯೋಗಿಸಬೇಕು.

ಶ್ರೀ ಎಸ್. ಜಿ. ನರಸಿಂಹೇಗೌಡ.—ಇಂತಿಂಥ ಸಾಮಾನುಗಳನ್ನೇ ಉಪಯೋಗಿಸಬೇಕು ಎಂದು ರೂಲ್ಸ್ ಇವೆ. ಅವನ್ನು ಬದಲಾವಣೆ ಮಾಡಬಹುದು ಎಂದೂ ಇದೆ. ಆ ಪ್ರಕಾರ ನಾನು ಸುಮಾರು 100 ಪ್ರೈಮರಿ ಸ್ಕೂಲಿನ ಕಟ್ಟಡಗಳಿಗಾಗಿ ಇಂತಹ ಮರವನ್ನೇ ಉಪಯೋಗಿಸಬೇಕೆಂದು ಹೇಳಿದ್ದೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಈಗ ಯಾವ ರೀತಿ ಹಣವನ್ನು ಖರ್ಚು ಮಾಡುತ್ತಿದ್ದೇವೋ, ಅದು ಸದ್ವಿನಿಯೋಗವಾಗಿ ಒಂದೊಂದು ಕಟ್ಟಡ ಸುಮಾರು 50-60 ವರ್ಷಗಳವರೆಗೂ ಬಾಳಿಕೆಗೆ ಬರುತ್ತದೆ. ಏಕೆಂದರೆ ಮೊದಲು ಬಿಲ್ಡಿಂಗ್ ಎಕ್ಸ್‌ಪರ್ಟ್ ಸಲಹೆ ಪಡೆದು ಕಟ್ಟಡಗಳನ್ನು ಕಟ್ಟುತ್ತಿದ್ದೇವೆ. ಆವಶ್ಯಕತೆ ಬಂದಾಗ ರೂಲ್ಸ್ ಪ್ರಕಾರ ಕೆಲವು ಟೈಪ್‌ಗಳನ್ನು ಮಾದರಿ ಟೈಪ್ ಹಾಗೆ ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕೇಂದ್ರ ಸರ್ಕಾರದವರು 50 ಸಾವಿರ ರೂಪಾಯಿಗಳನ್ನು ಮನೆಗಳನ್ನು ಕಟ್ಟುವುದಕ್ಕಾಗಿ ಕೊಟ್ಟಿದ್ದಾರೆ. ಅದರಿಂದ ಜನರಿಗೆ ರಿಲೀಫ್ ಕೊಡಬೇಕಾಗಿದೆ. ಕೇವಲ ಈ ವರ್ಷದಲ್ಲಿ 20 ಮನೆಗಳನ್ನು ಮಾತ್ರ ಕಟ್ಟಿಸುವುದಕ್ಕೆ ಪ್ರೋಗ್ರಾಂ ಹಾಕಿಕೊಂಡಿದ್ದೀರಿ. ಅದು ಸರಿಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಅದಕ್ಕೇ ಡಿಫಿಕಲ್ಟಿ ಇದೆ. 2,500 ರೂಪಾಯಿಗಳೊಳಗೇ ಒಂದು ಮನೆಯನ್ನು ಕಟ್ಟಿಸಿಕೊಡಿ ಎಂದು ಹೇಳಿದರೆ ಹೇಗೆ ?

ಶ್ರೀ ಜೆ. ಬಿ. ಮಲ್ಲಾರಾಧ್ಯ.—ನನಗೆ 10 ಮನೆಗಳ ಕಂಟ್ರಾಕ್ಟ್ ಕೊಡಿ, ನಾನು ಅವನ್ನು ಕಟ್ಟಿಸಿ ಕೊಡುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಇವೊತ್ತೇ ಕೊಡುತ್ತೇನೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕೆಲವು ಕಡೆಗಳಲ್ಲಿ ತೆಂಗಿನ ಮರವನ್ನು ಉಪಯೋಗಿಸಿ ಬಾಗಿಲುಗಳನ್ನೂ ಕಿಟಕಿಗಳನ್ನು ಮಾಡಿದ್ದಾರೆ. ಅನೇಕ ಲೋಕಲ್ ಮೆಟೀರಿಯಲ್ಸ್ ಪಡೆದು ಬೇವಿನ ಮರಗಳಿಂದ ಮರದ ಹಲಗೆಗಳನ್ನು ಮಾಡಿದ್ದಾರೆ. ಆ ರೀತಿಯಾಗಿ ಕಟ್ಟಿರತಕ್ಕ ಮನೆಗಳೂ ಇವೆ.

ಶ್ರೀ ಅಣ್ಣಾರಾವ್ ಗಣಮುಖಿ.–ಅಂತಹ ಟೈಪನ್ನು ಕೊಡಿ, ಎಕ್ಸ್‌ಪರ್ಟ್ಸ್‌ನ್ನು ಕರೆಸುತ್ತೇವೆ. ಅದನ್ನು ಅವರು ಚೆನ್ನಾಗಿ ಪರೀಕ್ಷೆ ಮಾಡಿ ಅವು ಅನುಕೂಲವೆಂದು ತೀರ್ಮಾನಿಸಿದ ಮೇಲೆ ಆ ರೀತಿಯೇ ಕಟ್ಟಿಸೋಣ.

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಅದೇ ಬರುವುದು ಕಷ್ಟ.

ಶ್ರೀ ಅಣ್ಣಾರಾವ್ ಗಣಮುಖಿ.—ಎರಡು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚಿಗೆ ಕೊಡದೇ ಇದ್ದರೂ ಗುಲ್ಬರ್ಗ, ರಾಯಚೂರು, ಮುಂತಾದ ಸ್ಥಳಗಳಲ್ಲಿ ಅಷ್ಟರಲ್ಲೇ ಮನೆ ಕಟ್ಟಬಹುದು. ಆದರೆ ಇಲ್ಲಿ 2,500 ರೂಪಾಯಿಗಳಲ್ಲಿ ಒಂದು ಮನೆಯನ್ನು ಕಟ್ಟಿಸಬೇಕು ಎಂದು ಮಾಡಿದ್ದೆವು. ಈಗ 2,500 ರೂಪಾಯಿಗಳಲ್ಲಿ ಎಲ್ಲೆಲ್ಲಿ ಮನೆಗಳನ್ನು ಕಟ್ಟುವ ಆವಶ್ಯಕತೆ ಇದೆಯೋ ಅಲ್ಲೆಲ್ಲಾ ಒಂದು ಸಾವಿರ ರೂಪಾಯಿಗಳಲ್ಲಿಯೇ ಮನೆ ಕಟ್ಟಬೇಕೆಂದು ಪ್ರಾರಂಭ ಮಾಡಿದ್ದೇವೆ. ಆ ಯೋಜನೆ ಈ ವರ್ಷದಲ್ಲಿ ಮುಗಿಸುವ ಭರವಸೆ ಇದೆ.

ಇನ್ನು ಅಲೋಕೇಷನ್ ಆಫ್ ಟೀಚರ್ಸ್ ವಿಷಯ. ಸಿಂಡಿಕೇಟಿನಲ್ಲಿ ಈ ಬಗ್ಗೆ ಏನು ಡಿಸಿಷನ್ಸ್ ತೆಗೆದುಕೊಳ್ಳುತ್ತಾರೋ ಅದನ್ನು ಇಲ್ಲಿ ಪರಿಶೀಲಿಸುತ್ತೇವೆ. ಆ ಬಗ್ಗೆ ವೈಸ್‌ಚಾನ್ಸಲರ್ ಒಂದು ಪತ್ರ ಬರೆದಿದ್ದಾರೆ. ಯೂನಿವರ್ಸಿಟಿಯವರು ಇದು ನಮಗೆ ಬೇಡ ಎಂದು ಹೇಳುತ್ತಾರೆ. ಬೇಕಾದಷ್ಟು ಈ ಬಗ್ಗೆ ರಿಸರ್ಚನ್ನು ಸಿಂಡಿಕೇಟಿನವರು ತೆಗೆದುಕೊಂಡಿದ್ದಾರೆಂದು ವೈಸ್ ಚಾನ್ಸಲರ್ ಅವರು ಒಂದು ಪತ್ರ ಬರೆದಿದ್ದಾರೆ. ಆ ಪ್ರಕಾರ ಎರಡು ವರ್ಷಗಳು ಈ ಕಾಲೇಜುಗಳ ಆಡಳಿತವನ್ನು ಅವರ ಕೈಯಲ್ಲಿ ಇಟ್ಟುಕೊಂಡಿದ್ದರು. ಒಂದು ಟ್ರೈನಿಂಗ್ ಕಾಲೇಜಿಗೆ ಪ್ರಾಕ್ಟಿಸಿಂಗ್ ಸ್ಕೂಲುಗಳು ಬಂದರೆ, ಆಗ ಈ ಎರಡು ಕಾಲೇಜುಗಳು ಪ್ರತಿಯೊಂದೂ ಯೂನಿವರ್ಸಿಟಿಯ ಕೈಕೆಳಗೆ ಇರಬೇಕು ಎಂದು ಹೇಳಿದ್ದಾರೆ. ಆದುದರಿಂದ ಎಲ್ಲೆಲ್ಲಿ ಯೂನಿವರ್ಸಿಟಿ ಸೀಟು ಇದೆಯೋ ಅಲ್ಲಿ ಕಾಲೇಜುಗಳು ಇರಬೇಕು. ಯೂನಿವರ್ಸಿಟಿ ಕ್ಲಾಸುಗಳನ್ನು ಯಾವುದಾದರೂ ಒಂದು ಬೇಸಿಸ್ ಇಟ್ಟುಕೊಂಡು ಮಾಡಬೇಕು. ಒಂದು ರಿಸರ್ಚ್ ಮೇಲೆ ವಿದ್ಯಾಭ್ಯಾಸ ಮಾಡಬೇಕೇ ವಿನಃ ಎಲ್ಲಾ ಕಾಲೇಜುಗಳನ್ನು ತೆಗೆದುಕೊಂಡು ಕೇವಲ ಎರಡೇ ಕಾಲೇಜುಗಳನ್ನು ಮಾಡಿ ಎಂದು ಹೇಳಿದರೆ ಅದು ಆಗುವುದಿಲ್ಲ. ಇಲ್ಲಿ ಟೀಚರ್ಸ್ ಸ್ಕಾಲರಿಗೆ ಶೇಕಡ 80 ಕೊಡುತ್ತೇವೆ. ಇತರ ಕಡೆಗಳಲ್ಲಿ ಶೇಕಡ 50 ಕೊಡುತ್ತಾರೆ. ಶ್ರೀ ಮಲ್ಲಾರಾಧ್ಯರು ಸಿಂಡಿಕೇಟಿನಲ್ಲಿಯೇ ಇದ್ದಾರೆ. ಅವರ ರೆಜಲ್ಯೂಷನ್ ಪ್ರಕಾರ ಬೆಸ್ಟ್ ಟ್ರೈನಿಂಗ್ ಕೊಡು

ವುದಕ್ಕೋಸ್ಕರ ಮತ್ತು ರಿಸರ್ಚ್ ಮುಂತಾದುವುಗಳಿಗೋಸ್ಕರ ಮೈಸೂರಿನಲ್ಲಿಯೇ ಒಂದು ಯೂನಿವರ್ಸಿಟಿ ಕಾಲೇಜನ್ನು ಸ್ಥಾಪನೆ ಮಾಡಬೇಕೆಂದು ಈಗ ಒಂದು ಅಭಿಪ್ರಾಯವನ್ನು ಇಟ್ಟುಕೊಂಡಿದ್ದಾರೆ. ಅದಕ್ಕೆ ಸರ್ಕಾರದವರ ಪೂರ್ಣ ಬೆಂಬಲ ಯಾವುದಾದರೂ ಒಂದು ಲೆವಲ್ಲಿನಲ್ಲಿ ಬಂದರೆ ಅವೆಲ್ಲವನ್ನೂ ಸರಿಮಾಡಬಹುದು ಎಂದು ಕೆಲವರು ಹೇಳುತ್ತಾರೆ. ಕಾಲೇಜುಗಳನ್ನು ಸರ್ಕಾರದವರು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಕೆಲವರು ಹೇಳುತ್ತಾರೆ. ಸರ್ಕಾರದವರು ಈ ಕಾಲೇಜುಗಳನ್ನು ತೆಗೆದುಕೊಂಡರೆ ಸರಿಹೋಗುತ್ತದೆ ; ಯೂನಿವರ್ಸಿಟಿಯವರು ತೆಗೆದುಕೊಂಡರೆ ಸರಿಹೋಗುವುದಿಲ್ಲವೆಂದು ನಮ್ಮ ಅಭಿಪ್ರಾಯವೂ ಆಗಿದೆ. ಆದುದರಿಂದ ಆ ವಿಷಯ ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ.

Sri J. B. MALLARADHYA.—The decision is in consonance with the decision of the University Grants Commission. You must take over the colleges.

ಶ್ರೀ ಅಣ್ಣಾರಾವ್ ಗಣಮುಖಿ.—ಈ ಸಂದರ್ಭದಲ್ಲಿ ಒಂದು ಮಾತನ್ನು ತಿಳಿಸಬೇಕಾಗಿದೆ. ಮೊದಲಿಯಾರ್ ಕಮಿಟಿಯ ವರದಿಯಲ್ಲಿ ಹೀಗೆ ಹೇಳಿದೆ :—

> "The Committee feel that the University should no longer be responsible for the running of Colleges that are now under its charge with the exception of two Colleges, ...It is understood that the Medical Colleges have been taken over by the Government. In the like manner the Arts and Science Colleges should be taken over by the Government..."

ಏನೆಂದರೆ ಇದು ನಮ್ಮ ಕಡೆಯಿಂದಲೇ ಆಗಿದೆ, ನಾವೇ ನಮ್ಮ ಸ್ವಂತ ಜವಾಬ್ದಾರಿಯಿಂದ ಮಾಡಿರುತ್ತೇವೇನೋ ಅನ್ನುವ ಹಾಗೆ ಭಾವಿಸಿಕೊಂಡು ವ್ಯಂಗ್ಯ ರೀತಿಯಲ್ಲಿ ಮಾತನಾಡಿರತಕ್ಕದ್ದು ಬಹಳ ತಪ್ಪು. ನಾವು ಈ ರೀತಿ ಮಾಡಲ ಎಲ್ಲರ ರೆಕಮಂಡೇಷನ್ನನ್ನೂ ಕೇಳಿದ್ದೇವೆ. ಹಾಗೆ ಎಲ್ಲರ ರೆಕಮಂಡೇಷನ್ನನ್ನು ತೆಗೆದುಕೊಂಡನಂತರವೇ ನಾವು ಈ ತೀರ್ಮಾನವನ್ನು ಕೈಗೊಂಡಿದ್ದೇವೆಂಬುದಾಗಿ ನಾನು ತಮ್ಮಲ್ಲಿ ಸವಿನಯದಿಂದ ಅರಿಕೆಮಾಡಿ ಕೊಳ್ಳುತ್ತೇನೆ. ನಾನೀಗ ತೆಗೆದುಕೊಂಡಿರತಕ್ಕ ತೀರ್ಮಾನ ಮೊದಲಿಯಾರ್ ಸಮಿತಿಯ ಸಿಫಾರಸುಗಳಿಗೆ ಅನುಗುಣವಾಗಿದೆ. ಮೇಲಾಗಿ ನಾವು ಈ ವಿಚಾರದಲ್ಲಿ ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿನವರ ಸಲಹೆಗಳನ್ನೂ ಸಹ ತೆಗೆದುಕೊಂಡಿದ್ದೇವೆ. ಹೀಗೆಲ್ಲ ನಾವು ಪೂರ್ವಾಪರಗಳನ್ನೆಲ್ಲ ಆಲೋಚನೆ ಮಾಡಿದ್ದಾಗಲೂ ಕೂಡ ಶ್ರೀಮಾನ್ ಷರೀಫ್ ಅವರು ಆ ರೀತಿ ಹೇಳಿರತಕ್ಕದ್ದು ಬಹಳ ತಪ್ಪು ಎಂಬುದಾಗಿ ನಾನು ಹೇಳುತ್ತೇನೆ. ಆದುದರಿಂದ ಶ್ರೀಮಾನ್ ಷರೀಫರು ಹೇಳಿರತಕ್ಕದ್ದನ್ನು ನಾನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ವರೆಗೂ ನಾನು ಹೇಳಿರತಕ್ಕ ಕಾರಣಗಳಿಗಾಗಿ ಸರ್ಕಾರದವರು ಒಂದು ಇಂಜಿನಿಯರಿಂಗ್ ಕಾಲೇಜನ್ನೂ, ಒಂದು ಆರ್ಟ್ಸ್ ಕಾಲೇಜನ್ನೂ ಮತ್ತು ಒಂದು ಸೈನ್ಸ್ ಕಾಲೇಜನ್ನೂ—ಹೀಗೆ ಮೂರು ಕಾಲೇಜುಗಳನ್ನೂ ಬಿಟ್ಟು ಉಳಿದ ಕಾಲೇಜುಗಳನ್ನು ಸರ್ಕಾರದವರ ಕೈಕೆಳಗೆ ತೆಗೆದುಕೊಳ್ಳಬೇಕೆಂದು ಒಂದು ತೀರ್ಮಾನ ತೆಗೆದು ಕೊಂಡಿದ್ದೇವೆ. ಹೀಗೆ ಸರ್ಕಾರದವರೊಂದು ಡಿಸಿಷನ್ ತೆಗೆದುಕೊಂಡಿದ್ದು ಬಹಳ ಯೋಗ್ಯವಾಗಿದೆಯೆಂಬುದಾಗಿ ಅನೇಕ ಕಡೆಗಳಲ್ಲಿ ನಾನು ಹೋದಾಗ ಜನರು ತಿಳಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳ ಟೆಕ್ನಿಕಲ್ ಎಜುಕೇಷನ್ನಿಗೆ ಬಹಳ ಮುತವರ್ಜಿ ಸಿಕ್ಕುತ್ತದೆಂದು ಹೇಳುತ್ತೇನೆ.

ಇನ್ನು ಸ್ಕಾಲರ್‌ಷಿಪ್‌ಗಳ ವಿಷಯವನ್ನೆತ್ತಿದ್ದಾರೆ. ಇವುಗಳನ್ನು ಸಕಾಲಕ್ಕೆ ಸರಿಯಾಗಿ ವಿದ್ಯಾರ್ಥಿಗಳಿಗೆ ಹಂಚಲಿಲ್ಲವೆಂದು ಹೇಳಿದ್ದಾರೆ. ಕೆಲವು ಕಡೆ ಕಾಲಕ್ಕೆ ಸರಿಯಾಗಿ ಡಿಸ್ಟ್ರಿಬ್ಯೂಟ್ ಮಾಡಲಾಗಿದೆ. ಆದರೆ ಇನ್ನು ಕೆಲವು ಕಡೆ ಎಕ್ಸ್‌ಟ್ರಾ ಗ್ರ್ಯಾಂಟ್ ಬೇಕಾಗಿದ್ದುದರಿಂದ ಸ್ವಲ್ಪ ಕಾಲ ವಿಳಂಬವಾಗಿದೆ. ಈ ಕಾರಣದಿಂದ ಕೆಲವು ಕಡೆ ಇದನ್ನು ಹಂಚುವುದರಲ್ಲಿ ನಿಧಾನವಾಗಿದ್ದರೂ ಆಗಿರಬಹುದು. ಇನ್ನು ಮುಂದಕ್ಕೆ ಈ ರೀತಿ ಆಗದಂತೆ ಏರ್ಪಾಡನ್ನು ಮಾಡಲಾಗುತ್ತದೆ. ಆದರೆ ಈ ಸಾರಿ ಈ ವಿಚಾರದಲ್ಲಿ ಒಂದು ದೊಡ್ಡ ತೊಂದರೆ ಏನು ಬಂತು ಎಂದರೆ—ಯಾರು ಬ್ಯಾಕ್‌ವರ್ಡ್ ಆಗಿದ್ದಾರೆಂಬುದನ್ನು ಪರಿಶೀಲಿಸಬೇಕಾದ ಅಗತ್ಯ ಬಂತು. ಅದಕ್ಕಾಗಿ ನಾವೀಗ ಒಂದು ಸಮಿತಿಯನ್ನು ಏರ್ಪಾಡು ಮಾಡಿದ್ದೇವೆ. ಆ ಸಮಿತಿಯವರ ನಿರ್ಣಯ ಬಂದ ಮೇಲೆ ಇದನ್ನು ಹಂಚಬೇಕೆಂಬ ಒಂದು ಅಭಿಪ್ರಾಯ ಬೇರೆ ಇದ್ದಿತು. ಸಾಲದುದಕ್ಕೆ ಕೇಂದ್ರ ಸರ್ಕಾರದ ಗ್ರ್ಯಾಂಟ್ ಸಹ ಈ ಸಾರಿ ಬಹಳ ಕಡಮೆ ಬಂದಿತ್ತು. ಈ ಕೆಲವು ಕಾರಣಗಳಿಂದ ಸ್ವಲ್ಪ ನಿಧಾನವಾಗಿರಬೇಕು.

ಇದಾದ ನಂತರ ನಮ್ಮ ವಿದ್ಯಾಭ್ಯಾಸದ ಸ್ಟ್ಯಾಂಡರ್ಡನ್ನು ಮತ್ತು ಕ್ವಾಲಿಟಿಯನ್ನು ಇಂಪ್ರೂವ್ ಮಾಡುವುದಕ್ಕೆ ಸರ್ಕಾರದವರೇನು ಸ್ಟೆಪ್ಸ್ ತೆಗೆದುಕೊಂಡಿದ್ದಾರೆಂಬ ಒಂದು ಪಾಯಿಂಟನ್ನು ಎತ್ತಿದ್ದಾರೆ. ಇದರ ದೆಸೆಯಿಂದ ನಾವು 12 ಟೀಚರ್ಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಷನ್‌ಗಳನ್ನು ತೆರೆಯಬೇಕೆಂದು ತೀರ್ಮಾನಿಸಿದ್ದೇವೆ. ಸ್ಕೂಲು ಇನ್‌ಸ್ಪೆಕ್ಟರುಗಳನ್ನೂ, ಡೆಪ್ಯುಟಿ ಸ್ಕೂಲು ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನೂ ಹೆಚ್ಚಿಸಬೇಕೆಂದು ತೀರ್ಮಾನಿಸಿದ್ದೇವೆ. ಇಷ್ಟೇ ಅಲ್ಲದೆ ಒಂದೊಂದು ತಾಲ್ಲೂಕನ್ನು 2-3-4 ರೇಂಜುಗಳನ್ನಾಗಿ ವಿಂಗಡಿಸಿ ಅಲ್ಲಿಗೆ ರೇಂಜ್ ಇನ್‌ಸ್ಪೆಕ್ಟರುಗಳ ಸಂಖ್ಯೆಯನ್ನು ಜಾಸ್ತಿ ಮಾಡಬೇಕೆಂದು ಮಾಡಿದ್ದೇವೆ. ಇತ್ತೀಚೆಗೆ 5 ಜನ ಸಬ್‌ಜೆಕ್ಟ್ ಇನ್‌ಸ್ಪೆಕ್ಟರುಗಳನ್ನು ಬೇರೆ ನೇಮಕ ಮಾಡಿದ್ದೇವೆ. ಈ 5 ಜನ ಸಬ್‌ಜೆಕ್ಟ್ ಇನ್‌ಸ್ಪೆಕ್ಟರುಗಳು ಯಾರು ಯಾರೆಂದರೆ ಸೈನ್ಸ್ ಅಂಡ್ ಮ್ಯಾಥಮೆಟಿಕ್ಸಿಗೆ ಒಬ್ಬರು; ಹ್ಯೂಮ್ಯಾನಟಿ ಮತ್ತು ಸೋಷಿಯಲ್ ಸರ್ವೀಸಿಗೆ ಒಬ್ಬರು. ರೀಜನಲ್ ಲ್ಯಾಂಗ್ವೇಜಿಗೆ ಒಬ್ಬರು ; ಇಂಗ್ಲೀಷಿಗೆ ಒಬ್ಬರು ಮತ್ತು ಫಿಜಿಕಲ್ ಎಜುಕೇಷನ್ನಿಗೆ ಒಬ್ಬರು—ಹೀಗೆ 5 ಜನ ಸಬ್‌ಜೆಕ್ಟ್ ಇನ್‌ಸ್ಪೆಕ್ಟರುಗಳನ್ನು ಎರಡು ಡಿಸ್ಟ್ರಿಕ್ಟ್‌ಗಳಲ್ಲಿ ಎಂದರೆ ಚಿತ್ರದುರ್ಗ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಪರೀಕ್ಷಾರ್ಥವಾಗಿ ನೇಮಕ ಮಾಡಿದ್ದೇವೆ. ಈ 5 ಜನ ಇನ್‌ಸ್ಪೆಕ್ಟರುಗಳೂ ಏಕ ಕಾಲಕ್ಕೆ ಒಂದೊಂದು ಸ್ಕೂಲಿಗೂ ಹೋಗಿ ಇನ್‌ಸ್ಪೆಕ್ಷನ್ ನಡೆಸುತ್ತಾರೆ. ಆಯಾ ಸ್ಕೂಲಿಗೆ ಇನ್‌ಸ್ಪೆಕ್ಷನ್‌ಗೆ

(ಶ್ರೀ ಅಣ್ಣಾರಾವ್ ಗಣಮುಖಿ)

ಹೋದ ಕಾಲದಲ್ಲಿ ಅಲ್ಲಿರತಕ್ಕ ಟೀಚರುಗಳು ಹುಡುಗರಿಗೆ ಹೇಗೆ ಟೀಚ್ ಮಾಡುತ್ತಾರೆಂಬುದನ್ನು ಸ್ವತಃ ಅಲ್ಲೇ ಕುಳಿತು ನೋಡಿ ಅವರಿಗೆ ಈ ಟೀಚಿಂಗಿನಲ್ಲಿ ಏನೇನು ಸರಿಪಡಿಸಬೇಕಾಗುತ್ತೋ ಅದನ್ನೆಲ್ಲ ಅಲ್ಲೇ ಸರಿಯಾಗಿ ತಿಳಿವಳಿಕೆಕೊಟ್ಟು ಅದನ್ನೆಲ್ಲ ಅಲ್ಲೇ ಸರಿಪಡಿಸುತ್ತಿದ್ದಾರೆ. ಈ 5 ಜನ ಸಬ್ ಜೆಕ್ಟ್ ಇನ್ಸ್‌ಪೆಕ್ಟರುಗಳಾದರೋ ಎಕ್ಸ್‌ಪರ್ಟ್‌ಗಳು. M.A., M.Sc., ಇತ್ಯಾದಿಗಳನ್ನು ಪಾಸ್ ಮಾಡಿರತಕ್ಕವರು. ಈ ರೀತಿಯ ಒಂದು ಹೊಸ ನಮೂನೆ ಪದ್ಧತಿಯನ್ನು ಈಗಾಗಲೇ ಜಾರಿಗೆ ತಂದಿದ್ದೇವೆ. ಇದರ ಪರಿಣಾಮವೇನಾಗುತ್ತದೆಂಬುದನ್ನು ನೋಡಿಕೊಂಡು, ಇದು ಚೆನ್ನಾಗಿರುತ್ತದೆಂದು ರಿಪೋರ್ಟ್ ಬಂದರೆ ಈ ಪದ್ಧತಿಯನ್ನು ದೇಶದಾದ್ಯಂತವೂ ಜಾರಿಗೆ ತರಬೇಕೆಂದುಕೊಂಡಿದ್ದೇವೆ. ಹೀಗೆಲ್ಲಾ ನಾವು ಈಗ ಇನ್ಸ್‌ಪೆಕ್ಷನ್ ಸಿಬ್ಬಂದಿಯನ್ನು ಹೆಚ್ಚಿಸಿರುವುದರಿಂದ D. E. O ಮತ್ತು D. D. P. I. ಅವರೇ ಹೋಗಿ ಪರೀಕ್ಷೆ ಮಾಡಬೇಕೆಂಬ ಅಗತ್ಯ ಅಷ್ಟೇನೂ ಇರುವುದಿಲ್ಲ. ಈಗ ನಾವು ಕೈಗೊಂಡಿರತಕ್ಕ ಏರ್ಪಾಡು ಬಹಳ ಚೆನ್ನಾಗಿರುತ್ತದೆಂದು ಅನೇಕ ಪ್ರವೀಣರಿಂದ ಅಭಿಪ್ರಾಯಗಳು ಬಂದಿವೆ. ಇವರಿಂದ ನಮ್ಮ ವಿದ್ಯಾಭ್ಯಾಸಕ್ಕೆ ಬಹಳ ಸಹಾಯಕವಾಗಿರುತ್ತದೆಂದು ಅನೇಕರು ಹೇಳುತ್ತಿದ್ದಾರೆ. ಆದರೆ ನಮ್ಮ ಸದಸ್ಯರು ಈ ವಿಚಾರವನ್ನು ಹೀಗೆ ಒಂದು ಅಕ್ಯಾಡೆಮಿಕ್ ಸ್ಟೈಡಿನಿಂದ ನೋಡದೆ ಬರಿಯ ಅಡ್ಮಿನಿಸ್ಟ್ರೇಟಿವ್ ಸ್ಟೈಡಿನಿಂದಲೇ ನೋಡಿ ಟೀಕೆ ಮಾಡುತ್ತಿದ್ದಾರೆ. ಅದು ಸರಿಯಾದುದಲ್ಲ.

ಇನ್ನು ಟೆಕ್ಸ್ಟ್ ಬುಕ್ಕುಗಳ ವಿಚಾರ; ಈಗಾಗಲೇ ನಮ್ಮ ರಿಸರ್ಚ್ ಬ್ಯೂರೋನವರು 1, 2, ಮತ್ತು 3ನೆಯ ತರಗತಿಗಳ ರೀಡರುಗಳನ್ನು ತಯಾರಿಸಿದ್ದಾರೆ. 5, 6, 7ನೆಯ ತರಗತಿಗಳ ಸಿಲಬಸ್ ಹಾಗೂ ಡ್ರಾಫ್ಟ್ ಟೆಕ್ಸ್ಟ್ ಬುಕ್ಕುಗಳನ್ನು ತಯಾರಿಸಿದ್ದಾರೆ. ಅವು ಈಗ ತಜ್ಞ ಸಮಿತಿಯ ಪರಿಶೀಲನೆಯಲ್ಲಿರುತ್ತವೆ. ಇನ್ನು 8-9-10 ನೆಯ ತರಗತಿಗಳ ಸ್ಟ್ಯಾಂಡರ್ಡಿಗೆ ತಕ್ಕ ಸಿಲಬಸ್ಸನ್ನೂ ತಯಾರಿಸಿದ್ದಾರೆ...

Sri J. B. MALLARADHYA.—Is that the only work of the Research Bureau attached to the D. P. I.—*i. e.*, preparation of Text-Books ?

Sri ANNA RAO GANAMUKHI.—I would further mention—Preparation of Syllabus, and writing of Kannada Books, ಅನಂತರguide books for teachers in General Science, general mathematcis, social Studies, Basic Education, and Physical Education. ಇದರಲ್ಲಿರತಕ್ಕವರು ಇಂಗ್ಲೆಂಡ್ ಮತ್ತು ಅಮೇರಿಕಾ ದೇಶಗಳಲ್ಲಿರತಕ್ಕ ಪುಸ್ತಕಗಳನ್ನೆಲ್ಲ ಸ್ಟಡಿ ಮಾಡಿದ್ದಾರೆ. ಅಲ್ಲಿಯ ವಿದ್ಯಾರ್ಥಿಗಳ ಹಾಗೆ ಇಲ್ಲಿಯ ವಿದ್ಯಾರ್ಥಿಗಳ ಸ್ಟ್ಯಾಂಡರ್ಡ್ ಕೂಡ ಹೆಚ್ಚಿಸಲು ಏನೇನು ಬದಲಾವಣೆಗಳನ್ನು ಮಾಡಬೇಕೋ ಅವುಗಳನ್ನೆಲ್ಲ ಪರಿಶೀಲಿಸಿ ಮಾಡಿರುತ್ತಾರೆ. ನಮ್ಮ ಉಪಾಧ್ಯಾಯರುಗಳ ಸ್ಟ್ಯಾಂಡರ್ಡನ್ನೂ ಸಹ ಹೆಚ್ಚು ಮಾಡಲು ಆ ಬಗ್ಗೆ ಗೈಡ್ ಬುಕ್ಕುಗಳನ್ನು ತಯಾರು ಮಾಡ ತೊಡಗಿದ್ದಾರೆ. ಈ ಕೆಲಸಗಳನ್ನೆಲ್ಲ ಮಾನ್ಯ ಸದಸ್ಯರು ಅಲ್ಲಿಗೆ ಹೋಗಿ ಸ್ವತಃ ತಮ್ಮ ಕಣ್ಣಿನಿಂದ ನೋಡಿದರೆ ಅವರಿಗೆ ನಾವೀಗ ಏನೇನು ಮಾಡುತ್ತಿದ್ದೇವೆಂಬುದು ಗೊತ್ತಾದೀತೇ ಹೊರತು ನಾವೀಗ ಮಾಡಿರತಕ್ಕ ಕಾರ್ಯಗಳು ಅವರಿಗೆ ಗೊತ್ತಾಗುವುದು ಬಹು ಕಷ್ಟ. ಹಾಗೆ ಮಾಡದೆ ದೂರದಲ್ಲೇ ಕುಳಿತು ಹೀಗೆಲ್ಲ ಟೀಕೆ ಮಾಡುವುದು ಸರಿಯಲ್ಲ. ಈಗ ನಾವು ಒಂದು ವೊಕೇಷನಲ್ ಗೈಡೆನ್ಸ್ ಬ್ಯೂರೊ ಎಂಬ ಹೆಸರಿನ ಸಂಸ್ಥೆಯೊಂದನ್ನು ಇಟ್ಟಿದ್ದೇವೆ. ಇದರಲ್ಲಿ ಉಪಾಧ್ಯಾಯರುಗಳಿಗೆ ಅನುಕೂಲವಾದ ಎಜುಕೇಷನಲ್ ಗೈಡ್ ವೊಕೇಷನ್ ಗೈಡ್, ಪೀರಿಯಾಡಿಕಲ್ಸ್ ಇತ್ಯಾದಿಗಳನ್ನೆಲ್ಲ ಹೊರಡಿಸಬೇಕೆಂದಿದ್ದೇವೆ. ಈ ವಿಚಾರದಲ್ಲಿ ಸಹ ನಾವೀಗ ಟೀಚರ್‌ಗಳಿಗೆ ಟ್ರೈನಿಂಗ್ ಕೊಟ್ಟು ಅವರನ್ನು ತಯಾರಿಸುತ್ತಿದ್ದೇವೆ. ಇದರಲ್ಲಿ ನುರಿತ ಉಪಾಧ್ಯಾಯರುಗಳಿಗೆ ಹುಡುಗರ ಆಪ್ಟಿಟ್ಯೂಡ್ ನೋಡಿಕೊಂಡು, ಅವರ ಒಲವಿಗೆ ತಕ್ಕಂತೆ ಸೂಕ್ತ ವಿದ್ಯಾಭ್ಯಾಸ ಕೊಡುತ್ತಾರೆ. ಯಾವ ಹುಡುಗನಿಗೆ ಎಂಥ ವಿದ್ಯೆಬೇಕು, after leaving the school whether he would go to College or for the Polytechnic or for service ಎನ್ನುವುದನ್ನೆಲ್ಲಾ ಅವರೇ ಉಪಾಧ್ಯಾಯರಾಗಿಯೂ ಮತ್ತು ಆ ಹುಡುಗರ ಹಿತೈಷಿಗಳಾಗಿಯೂ ಕೆಲಸ ಮಾಡಲು ಸಾಧ್ಯವಿದೆ. ಇಂಥ ಒಂದು ಶಾಲೆಯನ್ನೀಗ ನಾವು ತೆರೆದಿದ್ದೇವೆ. ಅದಕ್ಕಾಗಿ ನಮಗೆ ಕೇಂದ್ರ ಸರ್ಕಾರದವರಿಂದ ಗ್ರ್ಯಾಂಟ್ ಕೂಡ ದೊರೆಯುತ್ತಿದೆ.

ಹೋಮ್ ಸೈನ್ಸ್ ಸಬ್‌ಜೆಕ್ಟುಗಳನ್ನು ಗರ್ಲ್ಸ್ ಮಿಡಲ್ ಮತ್ತು ಹೈಸ್ಕೂಲುಗಳಲ್ಲಿ ಕೊಟ್ಟಿದ್ದೇವೆ. ಇದಕ್ಕಾಗಿ ಹೋಮ್ ಸೈನ್ಸ್ ಇನ್ಸ್‌ಪೆಕ್ಟರುಗಳನ್ನು ಈಗಾಗಲೇ ಅಪಾಯಿಂಟ್ ಮಾಡಿದ್ದೇವೆ. ಅವರು ಎಲ್ಲ ಕಡೆಗೂ ತಿರುಗಾಡಿ ಹೋಂ ಸೈನ್ಸ್ ಕೆಲಸ ಹೇಗೆ ನಡೆಯುತ್ತಿದೆಎನ್ನುವುದನ್ನು ನೋಡುತ್ತಾರೆ.

7-30 P.M.

ಶ್ರೀ ಬಿ. ಎಲ್. ನಾರಾಯಣಸ್ವಾಮಿ (ಮುಳಬಾಗಿಲು).—ಎಲ್ಲಾ ಹೈಸ್ಕೂಲುಗಳಲ್ಲಿಯೂ ಹೋಂ ಸೈನ್ಸ್‌ನ್ನು ಇಂಟ್ರೊಡ್ಯೂಸ್ ಮಾಡಿದ್ದೀರಾ ?

ಶ್ರೀ ಅಣ್ಣಾರಾವ್ ಗಣಮುಖಿ.— ಎಲ್ಲೆಲ್ಲಿ ಅದು ಇದೆಯೋ ಅಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆಯೇ, ಯಾವ ಪ್ರಕಾರವಾಗಿ ನಡೆಸುತಿದ್ದಾರೆಂದು ನೋಡುವುದಕ್ಕೆ, ಸ್ಪೆಷಲ್ ಇನ್ಸ್‌ಪೆಕ್ಟರುಗಳು ಇದ್ದ ಹಾಗೆ, ಈ ಸೂಪರಿಂಟೆಂಡೆಂಟರೂ ಹೋಂ ಸೈನ್ಸ್ ವಿಚಾರದಲ್ಲಿ ಸ್ಕೂಲಿನವರಿಗೆ ಸಲಹೆಗಳನ್ನು ಕೊಡುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕೆಲವು ಹೈಸ್ಕೂಲುಗಳಲ್ಲಿ ಹೋಂ ಸೈನ್ಸ್‌ನ್ನು ಕೊಡಬೇಕೆಂದು ಇನ್ನೂ ಕೇಳುತ್ತಲೇ ಇದ್ದಾರೆ.

ಶ್ರೀ ಅಣ್ಣಾರಾವ್ ಗಣಮುಖಿ.—ಹೋಂ ಸೈನ್ಸ್ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಇಂಟ್ರೊಡ್ಯೂಸ್ ಮಾಡುತ್ತಾರೆ. ಒಂದು ಪ್ಲಾನ್ ಪ್ರಕಾರ ಇಂಟ್ರೊಡ್ಯೂಸ್ ಮಾಡುತ್ತಾ ಇದ್ದೇವೆ.

ಆಮೇಲೆ 100 ಜನ ಟೀಚರುಗಳನ್ನು Physical Education ಟ್ರೈನಿಂಗಿಗಾಗಿ ಕಳುಹಿಸಿದ್ದೇವೆ. ಫಿಸಿಕಲ್ ಎಜುಕೇಷನ್ನಿಗಾಗಿ, 20 ಮಂದಿ ಗ್ರ್ಯಾಜುಯೇಟುಗಳನ್ನು ಹೈಸ್ಕೂಲುಗಳಿಗಾಗಿ ಸ್ಯಾಂಕ್ಷನ್ ಮಾಡಿದ್ದೇವೆ.

ಕ್ಯಾರೆಕ್ಟರ್ ಡೆವಲಪ್‌ಮೆಂಟ್ ವಿಷಯದಲ್ಲಿ ಹೇಳಿದರು. ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಶ್ರೀ

ಪ್ರಕಾಶಂ ಕಮಿಟಿ ಎಂದು ಒಂದು ಕಮಿಟಿ ಮಾಡಿದ್ದರು. ಅವರ ರಿಪೋರ್ಟ್ ಪರಿಶೀಲನೆಯಾಗುತ್ತಾ ಇದೆ. ಆ ರಿಪೋರ್ಟು ಬಂದ ಅನಂತರ ಏನು ಮಾಡಬೇಕೆಂಬು ದನ್ನು ವಿಚಾರ ಮಾಡುತ್ತೇವೆ.

ರೂ. 16,93,800ರ ಸ್ಕಾಲರ್‌ಷಿಪ್ಪನ್ನು ನಾವು ಗವರ್ನಮೆಂಟಿನವರು ಕೊಡುತ್ತಿದ್ದೇವೆ. ಬೊಂಬಾಯಿ ಕರ್ಣಾಟಕಕ್ಕೆ ರೂ. 5,87,000 ಕೊಡುತ್ತಿದ್ದೇವೆ; ರೂ. 22,00,711 ಸ್ಕಾಲರ್ ಷಿಪ್ ಸ್ಟೇಟ್ ಗವರ್ನಮೆಂಟ್ ಕೊಡುತ್ತಿದೆ. ಸೆಂಟ್ರಲ್ ಗವರ್ನಮೆಂಟ್ ಸ್ಕಾಲರ್ ಷಿಪ್‌ನ್ನು ರೂ. 15,74,000 ರೂಪಾಯಿಗಳವರೆಗೆ ಕೊಡು ತ್ತಾರೆ. ಹತ್ತು ಲಕ್ಷ ಡಿಸ್ಟ್ರಿಬ್ಯೂಟ್ ಮಾಡಿದ್ದಾರೆ. ಕೆಲವು ಜನರಿಗೆ ಫ್ರೀಷಿಪ್ ಆಗಿ ಕೊಡುತ್ತಾರೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ರಿನ್ಯು ಯಲ್ ಮತ್ತು ಫ್ರೀಷಿಪ್ ಆಗಿ ಕೊಡುವಾಗ ಇಂಡಿಯಾ ಗವರ್ನಮೆಂಟಿನವರು ಪ್ರಿನ್ಸಿಪಲ್ಸ್‌ನಲ್ಲಿ ಡೀವಿಯೇಟ್ ಮಾಡಿ ತುಂಬಾ ಅನ್ಯಾಯವಾಗಿದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಎಲ್ಲೆಲ್ಲಿ ಡೀವಿ ಯೇಟ್ ಮಾಡಿದ್ದಾರೆಂಬುದನ್ನು ತೋರಿಸಿದರೆ, we will look into it. ಟೆಕ್ನಿಕಲ್ ಮತ್ತು ಮೆಡಿ ಕಲ್ ಎಜುಕೇಷನ್ನಿಗೆ ಪ್ರಯಾರಿಟಿ ಕೊಟ್ಟಿದ್ದಾರೆ. ಆ ಮೇಲೆ ಹಣ ಉಳಿದಿದ್ದರೆ ಲಾ ಕಾಲೇಜು ಮುಂತಾ ದುವಕ್ಕೆ ಕೊಟ್ಟಿದ್ದಾರೆ. ಸೆಂಟ್ರಲ್ ಲೈಬ್ರರಿಗೆ 17, 671 ರೂ. ಖರ್ಚು ಮಾಡುತ್ತೇವೆಂದು ಹೇಳಿದ್ದೇನೆ. ಡಿಸ್ಟ್ರಿಕ್ಟ್ ಲೈಬ್ರರಿಗೆ 20 ಸಾವಿರ ರೂಪಾಯಿ ಖರ್ಚು ಮಾಡುತ್ತೇವೆ.

ಏನೇನು ಸಲಹೆಗಳನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೋ ಅವುಗಳೆಲ್ಲವನ್ನೂ ಮನಸ್ಸಿನಲ್ಲಿಟ್ಟು ಕೊಂಡು, ಎಲ್ಲೆಲ್ಲಿ ನ್ಯೂನತೆಗಳಿವೆಯೋ ಅವುಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ಅಚೀವ್‌ಮೆಂಟ್ಸ್ ಹೇಳಬೇಕಾಗಿದೆ. ಕರೆಂಟ್ ಇಯರ್ ಮತ್ತು ಲಾಸ್ಟ್ ಇಯರಿನಲ್ಲಿ ಪ್ರೀಪ್ರೈಮರಿ ಎಜುಕೇಷನ್ ಕೊಟ್ಟಿದ್ದೇವೆ. Free secondary education to students whose parents income is less than Rs. 1200 ಮಾಡಿ ದ್ದೇವೆ. ಇದರಲ್ಲಿ 78 ಪರ್ಸೆಂಟ್ ಹುಡುಗರಿಗೆ ಫೀ ಮಾಫಿ ಮಾಡಿ ಫ್ರೀಷಿಪ್ ಕೊಡಬಹುದೆಂದು ಲೆಕ್ಕಹಾಕಿ ದ್ದೇವೆ. ಆದರೂ ಇಲ್ಲಿಯವರೆಗೂ ಯೂನಿಫಾರಂ ಬೆನಿಫಿಟ್ಸ್ ಟೀಚರ್ ಟ್ರೇನೀಸ್‌ಗೆ ಎಲ್ಲಾ ಏರಿಯಾ ಗಳಲ್ಲಿಯೂ ಕೊಡಬೇಕೆಂದು ಡಿಸಿಷನ್ ತೆಗೆದು ಕೊಂಡಿದ್ದೇವೆ.

If graduate-teachers have taken training at their own cost, ಎರಡು advance increments ಅವರಿಗೆ ಕೊಡಬೇಕೆಂದು ಮಾಡಿದ್ದೇವೆ.

ಶ್ರೀ ಜೆ. ಬಿ. ಮಲ್ಲಾರಾಧ್ಯ .—ಪ್ರೈವೇಟ್ ಸ್ಕೂಲುಗಳಲ್ಲಿ ಡ್ರಾ ಮಾಡುತ್ತಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ನಾವು ಕಾನ್ಸ್ಟ್ರೀ ಮಾಟ್ ಮಾಡುತ್ತೇವೆಂದು ಹೇಳಿದ್ದೇವೆ. ಪ್ರೈವೇಟ್ ಮೇನೇಜ್‌ಮೆಂಟಿನವರನ್ನು ನಾವು ಇನ್‌ಸಿಸ್ಟ್ ಮಾಡುವುದು ಹೇಗೆ?

Sri J. B. MALLARADHYA.—Sir, they come under your control in the educational matters. You must insist on them; otherwise, what is the use?

Sri ANNA RAO GANAMUKHI.—We can influence them at the most. I do not think there is any power in the hands of the Government to compel them.

Sri M. C. NARASIMHAN.—In respect of the new syllabus, some private institutions are already retrenching.

Sri ANNA RAO GANAMUKHI.—That impression was there. Here after, you cannot appoint a teacher who is unqualified, that is, he must be a graduate. But, non-graduates that, is S.S.L.C. and above who are working in those High schools now should not be retrenched. But, in future they must appoint only graduate teachers.

ಫಿಸಿಕಲ್ ಎಜುಕೇಷನ್ ಚೆನ್ನಾಗಿರಬೇಕು. ಕಾಲೇಜ್ ಆಫ್ ಫಿಸಿಕಲ್ ಎಜುಕೇಷನ್ನಿಗೆ 80 ಸ್ಟೂಡೆಂಟ್ಸನ್ನು ತೆಗೆದುಕೊಳ್ಳುತ್ತೇವೆ. ಫಿಸಿಕಲ್ ಎಜುಕೇಷನ್ನಿಗೆ ಮಹತ್ತ್ವ ಸಿಗಬೇಕೆಂದು ಗ್ರಾಜು ಯೇಟ್ ಟೀಚರುಗಳನ್ನು ಫಿಸಿಕಲ್ ಎಜುಕೇಷನ್ನಿನಲ್ಲಿ ಟ್ರೈನ್ ಮಾಡುತ್ತೇವೆ.

ನಾನು ಇನ್ನು ವಿಶೇಷ ಟೈಮ್ ತೆಗೆದುಕೊಳ್ಳು ವುದಿಲ್ಲ. ನಮ್ಮ ಮಾನ್ಯ ಸದಸ್ಯರಾದ ಸುಬ್ಬಯ್ಯ ನಾಯಕರು ಹಿಂದಿ ಶಿಕ್ಷಣದ ಬಗ್ಗೆ ಕೆಲವು ಮಾತು ಗಳನ್ನು ಹೇಳಬೇಕೆಂದು ಹೇಳಿದರು. ಅವರು ನನ್ನ ಸಂಗಡ ಮಾತನಾಡಿದರೆ ಏನೇನು ಆ ಬಗ್ಗೆ ಮಾಡಿದ್ದೇ ನೆಂಬ ಬಗ್ಗೆ ಮಾಹಿತಿಯನ್ನು ಕೊಡುತ್ತೇನೆ.

ಇಂಟರ್ ಮಿಡಿಯೇಟ್ ಕಾಲೇಜುಗಳನ್ನು ಅಪ್ ಗ್ರೇಡ್ ಮಾಡುವ ವಿಷಯ ಇನ್ನೂ ಸರ್ಕಾರದ ಪರಿಶೀಲನೆಯಲ್ಲಿದೆ. ಈಗಲೇ ಇನ್ನೂ ಏನನ್ನೂ ಹೇಳುವುದಕ್ಕಾಗುವುದಿಲ್ಲ.

ಈ ಗ್ರ್ಯಾಂಟನ್ನು ಮಾನ್ಯ ಸಭೆಯವರು ಅಂಗೀಕರಿಸು ತ್ತಾರೆಂದು ನಂಬಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—The question is:

"That a sum not exceeding Rs. 13,21,74,000 be granted to the Government to defray the charges which will come in course of payment during the year ending 31st day of March 1961, in respect of 'Education'."

The motion was adopted.